# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 02 ಸಂಚಿಕೆ – 60 | ಆರ್‌ಎನ್‌ಐ ನಂ: ಕೆಎಆರ್‌ಕೆಎಎನ್/2023/88462 | ಚಿತ್ರದುರ್ಗ | ದಿನಾಂಕ: 17–09–2024 ಮಂಗಳವಾರ | ಪುಟ: 4 | ಬೆಲೆ : ರೂ.2–00
Volume - 02 Issue - 60 | RNI No: KARKAN/2023/88462 | Chitradurga | Date: 17-09-2024 Tuesday | Page: 4 | Price: Rs. 2-00



**ಒಳಪುಟದ ಸುದ್ದಿಗಳು**

ನನ್ನನ್ನು ಅಷ್ಟು ಸುಲಭ ಅಂದುಕೊಳ್ಳಬೇಡಿ: ಮುಖ್ಯಮಂತ್ರಿ ಸಿದ್ದರಾಮಯ್ಯ 2

ಕನ್ನಡದಲ್ಲೆ ಚೀಟಿ ಬರೆದು ಕೊಡುತ್ತಿದ್ದೇನೆ ನೀ ಹೋಗಿ ಮಾತ್ರೆ ತಗೋ...... ಶಿವ... 3

ಸೆ.27ರಿಂದ ಐದು ದಿನಗಳ ಕಾಲ ಚಳ್ಳಕೆರೆ ಪ್ರೀಮಿಯರ್ ಲೀಗ್ 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ವಿಪ್ ಉಲ್ಲಂಘನೆ: ನಗರಸಭೆ ಉಪಾಧ್ಯಕ್ಷೆ ಸೇರಿ ೩ ಮಂದಿ ಉಚ್ಚಾಟಿಸಿದ ಬಿಜೆಪಿ

» ಚಿತ್ರದುರ್ಗ



ಅ.26 ರಂದು ನಡೆದ ಚಿತ್ರದುರ್ಗ ನಗರಸಭೆಯ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಯಲ್ಲಿ ಪಕ್ಷದ ಶಿಸ್ತನ್ನು ಉಲ್ಲಂಘನೆ ಮಾಡಿದ ಉಪಾಧ್ಯಕ್ಷರು ಸೇರಿದಂತೆ 3 ಜನ ನಗರಸಭಾ ಸದಸ್ಯರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷರಾದ ಎ.ಮುರಳಿ ತಿಳಿಸಿದ್ದಾರೆ. ಈ ಬಗ್ಗೆ ಪತ್ರಿಕಾ ಹೇಳಿಕೆಯನ್ನು ನೀಡಿರುವ ಅವರು, ಚಿತ್ರದುರ್ಗ ನಗರಸಭೆಯ ಅದ್ಯಕ್ಷ/ಉಪಾದ್ಯಕ್ಷ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ವಿರುದ್ಧ ಮತ ಚಲಾವಣೆ ಮಾಡಿದ್ದು ಪಕ್ಷವು ವಿಪ್ ನೀಡಿದ್ದರು ಸಹ ಅದನ್ನು ಕಡೆಗಣಿಸಿ ಪಕ್ಷಕ್ಕೆ ಮುಜುಗರಕ್ಕೆ ಕಾರಣರಾಗಿರುವ ಇವರುಗಳಿಂದ ಪಕ್ಷದ ಶಿಸ್ತು ಉಲ್ಲಂಘನೆಯಾಗಿದೆ. ಆದ್ದರಿಂದ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳ ಕಾಲ ಉಚ್ಚಾಟಿಸಲಾಗಿದೆ ಎಂದಿದ್ದಾರೆ. ವಾರ್ಡ್ ನಂ 1ರ ನಾಗಮ್ಮ, 17ರ ಜಯ್ಯಪ್ಪ, 30ರ ಮಂಜಣ್ಣ ಹಾಗೂ 33 ನೇ ವಾರ್ಡನ ಶ್ರೀದೇವಿ ಚಕ್ರವರ್ತಿ ಪಕ್ಷದಿಂದ ಉಚ್ಚಾಟನೆ ಮಾಡಿದ ನಗರಸಭಾ ಸದಸ್ಯರಾಗಿದ್ದಾರೆ.

### ವಿಶ್ವಕರ್ಮ ಜಯಂತಿ

» ಚಿತ್ರದುರ್ಗ

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ ಇದೇ.ಸೆ.17ರಂದು ಬೆಳಿಗ್ಗೆ 11.30ಕ್ಕೆ ನಗರದ ತ.ರಾ.ಸು ರಂಗಮಂದಿರದಲ್ಲಿ ವಿಶ್ವಕರ್ಮ ಜಯಂತಿ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಯೋಜನಾ ಮತ್ತು ಸಾಂಖ್ಯಿಕ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಅಧ್ಯಕ್ಷತೆ ವಹಿಸುವರು.

### ಸಾಲ ಸೌಲಭ್ಯಕ್ಕಾಗಿ ಅರ್ಜಿ

■ ಚಿತ್ರದುರ್ಗ

ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿರುವ ನಿಗಮಗಳಾದ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡ ಅಭೀವೃದ್ಧಿ ನಿಗಮ ಹಾಗೂ ಪ.ಜಾತಿ ಅಲೆಮಾರಿ, ಅರೆ ಅಲೆಮಾರಿಗಳ ಅಭಿವೃದ್ಧಿ ನಿಗಮಗಳಿಂದ 2024–25ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.10 ಕೊನೆಯ ದಿನವಾಗಿದೆ.ಪರಿಶಿಷ್ಟ ಜಾತಿ ಸಮುದಾಯಗಳ ಆರ್ಥಿಕ ಅಭಿವೃದ್ಧಿಗಾಗಿ, ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಉದ್ಯಮಶೀಲತಾ ಅಭಿವೃದ್ಧಿ ಯೋಜನೆ–1, ಉದ್ಯಮಶೀಲತಾ ಅಭಿವೃದ್ಧಿ ಯೋಜನೆ–2, ಉದ್ಯಮಶೀಲತಾ ಅಭಿವೃದ್ಧಿ ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಮೈಕ್ರೋ ಕ್ರೆಡಿಟ್ (ಪ್ರೇರಣಾ) ಯೋಜನೆ, ಭೂ ಒಡೆತನ ಯೋಜನೆ ಹಾಗೂ ಗಂಗಾ ಕಲ್ಯಾಣ ಯೋಜನೆಗಳಿಗೆ ಅರ್ಜಿ ಸಲ್ಲಿಸಬಹುದು.ಈ ಯೋಜನೆಗಳ ಕುರಿತಾಗಿ ಸವಿವರವಾದ ಮಾಹಿತಿಯನ್ನು ಸಮಾಜ ಕಲ್ಯಾಣ ಇಲಾಖೆಯ ಸಾಲ ಸೇವೆಗಳ ಪೋರ್ಟಲ್ ವೆಬ್‌ಸೈಟ್ https://swdcorp.karnataka.gov.in ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು.ಆಸಕ್ತರು https://sevasindhu.karnataka.gov.in ತಂತ್ರಾಂಶದ ಮೂಲಕ ಕರ್ನಾಟಕ ಒನ್, ಗ್ರಾಮ ಒನ್, ಬೆಂಗಳೂರು ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. 2023–24ನೇ ಸಾಲಿನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.ಹೆಚ್ಚಿನ ಮಾಹಿತಿಗಾಗಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿ ದೂರವಾಣಿ ಸಂಖ್ಯೆ 08194–200214 ಅಥವಾ ಆಯಾ ತಾಲ್ಲೂಕಿನ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಿ.

### ಭದ್ರಾ ಮೇಲ್ದಂಡೆಗೆ ಅನುದಾನ ಬಿಡುಗಡೆಗೆ ಖ್ಯಾತೆ ತೆಗೆದ ಕಂದ್ರ ಸರ್ಕಾರ

# ನಮ್ಮವರಿಂದಲೇ ನಮಗೆ ದ್ರೋಹ: ಕಿಡಿ

» ಚಿತ್ರದುರ್ಗ

ಭದ್ರಾ ಮೇಲ್ದಂಡೆಗೆ ಅನುದಾನ ಬಿಡುಗಡೆ ಮಾಡಿಸುವಲ್ಲಿ ಉದಾಸೀನ ತೋರುತ್ತಿರುವ ಕೇಂದ್ರ ಸಚಿವ ವಿ.ಸೋಮಣ್ಣ ಅವರ ತುಮಕೂರು ಕಚೇರಿ ಮುಂಭಾಗ ಅಕ್ಟೋಬರ್ ತಿಂಗಳ ಮೊದಲ ವಾರ ತಮಟೆ ಚಳವಳಿ ನಡೆಸಲಾಗುವುದೆಂದು ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಕಾರ್ಯಾಧ್ಯಕ್ಷ ಬಿ.ಎ.ಲಿಂಗಾರೆಡ್ಡಿ ಹೇಳಿದರು.




ಭದ್ರಾ ಮೇಲ್ದಂಡೆಗೆ ಅನುದಾನ ತರದೆ ನಿದ್ರಾವಸ್ಥೆಗೆ ಜಾರಿರುವ ಜನಪ್ರತಿನಿಧಿಗಳ ಎಚ್ಚರಿಸುವ ಸಂಬಂಧ ನೀರಾವರಿ ಅನುಷ್ಠಾನ ಹೋರಾಟ ಸಮಿತಿಯಿಂದ ಸೋಮವಾರ □□□□□□ದುರ್ಗ ಶಾಸಕ ವೀರೇಂದ್ರ ಪಪ್ಪಿ ಅವರ ನಿವಾಸದ ಮುಂಭಾಗ ಹಮ್ಮಿಕೊಳ್ಳಲಾದ ತಮಟೆ ಚಳವಳಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು ನಮ್ಮವರಿಂದಲೇ ನಮಗೆ ದ್ರೋಹವಾಗುತ್ತಿದೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಭದ್ರಾ ಮೇಲ್ದಂಡೆ ಯೋಜನೆಯಡಿ ತುಮಕೂರು ಶಾಖಾ ಕಾಲುವೆ ಮೂಲಕ 85 ಸಾವಿರ ಹೆಕ್ಟೇರು ಪ್ರದೇಶಕ್ಕೆ ನೀರುಣಿಸಲಾಗುತ್ತಿದೆ. ಸುಮಾರು 131 ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಯೋಜನಾ ವ್ಯಾಪ್ತಿಗೆ ತುಮಕೂರು ಜಿಲ್ಲೆಯ ಶಿರಾ, ಚಿಕ್ಕನಾಯಕನಹಳ್ಳಿ, ಪಾವಗಡ ತಾಲೂಕು ಸೇರಿದೆ. ತುಮಕೂರು ಜಿಲ್ಲೆ ಪ್ರತಿನಿಧಿಸುತ್ತಿರುವ ಸಂಸದ ವಿ.ಸೋಮಣ್ಣ ಕೇಂದ್ರ ಸರ್ಕಾರದಲ್ಲಿ ಜಲಶಕ್ತಿ ಇಲಾಖೆಯ ಸಹಾಯಕ ಸಚಿವರಾಗಿದ್ದಾರೆ. ಭದ್ರಾ ಮೇಲ್ದಂಡೆ ಜಲಶಕ್ತಿ ವ್ಯಾಪ್ತಿಗೆ ಬರಲಿದೆ. ಕೇಂದ್ರ ಹಣ□□□□□□ ಸಚಿವ ನಿರ್ಮಲ ಸೀತಾರಾಮನ್ ಕರ್ನಾಟಕ ಪ್ರತಿನಿಧಿಸುತ್ತಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಪ್ರಮುಖ ಖಾತೆಗಳನ್ನು ಕರ್ನಾಟಕದವರು ನಿರ್ವಹಿಸಿದರೂ ಭದ್ರಾ ಮೇಲ್ದಂಡೆಗೆ ಅನುದಾನ ಬಿಡುಗಡೆಗೆ ಖ್ಯಾತೆ ತೆಗೆಯಲಾಗುತ್ತಿದೆ.ನಮ್ಮವರಿಂದಲೇನಮಗೆ ದ್ರೋಹವಾದರೆ, ಯಜಮಾನರುಗಳೇ ಮಕ್ಕಳಿಗೆ ವಿಷ ಉಣಿಸಲು ಮುಂದಾದರೆ ಯಾರ ಬಳಿ ನೋವುಗಳ ತೋಡಿಕೊಳ್ಳಲಿ ಎಂದರು.

ಭದ್ರಾ ಮೇಲ್ದಂಡೆ ಕುಂಠಿತವಾಗಲು ಕಾರಣವಾಗುತ್ತಿರುವವರ ಮನೆ ಮುಂಭಾಗ ನೀರಾವರಿ ಅನುಷ್ಠಾನ ಹೋರಾಟ ಸಮಿತಿ ತಮಟೆ ಚಳವಳಿ ಹಮ್ಮಿಕೊಂಡಿದೆ. ಕೇಂದ್ರ ಸಚಿವ ವಿ.ಸೋಮಣ್ಣ ಅವರ ಕಚೇರಿ ಮುಂಭಾಗ ಚಳವಳಿ ನಡೆಸಿ ಈ ದ್ರೋಹ ನ್ಯಾಯವಾ ಎಂದು ಪ್ರಶ್ನಿಸಲಾಗುವುದು. ತುಮಕೂರು ಜಿಲ್ಲೆಯ ಶಿರಾ, ಚಿಕ್ಕನಾಯಕನಹಳ್ಳಿ ಹಾಗೂ ಪಾವಗಡ ಭಾಗದ ಜನರು ಹೋರಾಟಕ್ಕೆ ಬೆಂಬಲಿಸುವಂತೆ ಲಿಂಗಾರೆಡ್ಡಿ ಮನವಿ ಮಾಡಿದರು.ನೀರಾವರಿ ಅನುಷ್ಠಾನ ಹೋರಾಟ ಸಮಿತಿಯು ಪಕ್ಷಾತೀತ ಸಂಘಟನೆಯಾಗಿದ್ದು ಮಧ್ಯಕರ್ನಾಟಕದ ನೀರಾವರಿ ಬೇಡಿಕೆಯನ್ನಷ್ಟೇ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮುಂದೆ ಮಂಡಿಸುತ್ತಿದೆ. ಈಗಾಗಲೇ ಸಂಸದ ಗೋವಿಂದ ಕಾರಜೋಳ ಅವರ ನಿವಾಸದ ಮುಂಭಾಗ ಪ್ರತಿಭಟನೆ ನಡೆದಿದೆ. ಸೆಪ್ಟಂಬರ್ 24 ರಂದು ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಅವರ ನಿವಾಸದ ಮುಂಭಾಗ ತಮಟೆ ಚಳವಳಿ ನಡೆಸಲಾಗುವುದು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಯ ಜವಾಬ್ದಾರಿ ಅರಿತು ಭದ್ರಾ ಮೇಲ್ದಂಡೆ ಕಾಮಗಾರಿ ಪೂರ್ಣಗೊಳಿಸಲಿ ಎಂದು ಬಿ.ಎ.ಲಿಂಗಾರೆಡ್ಡಿ ಒತ್ತಾಯಿಸಿದರು.

ಭದ್ರಾ ಮೇಲ್ದಂಡೆಗೆ 5300 ಕೋಟಿ ಅನುದಾನದ ನೆರವು ಘೋಷಿಸಿದ ಕೇಂದ್ರ ಈ ತಿಂಗಳ ಮೊದಲ ವಾರ ರಾಜ್ಯಕ್ಕೆ ಪತ್ರ ಬರೆದು ಖ್ಯಾತೆ ತೆಗೆದಿದೆ. ಇಲ್ಲಿವರೆಗಿನ ಲೆಕ್ಕ ಕೊಡುವಂತೆ ಸೂಚಿಸಿದೆ. ಮೊದಲು ಘೋಷಿತ 5300 ಕೋಟಿ ರು ಅನುದಾನ ನೀಡಿ ಲೆಕ್ಕ ಪಡೆದುಕೊಳ್ಳಲಿ. ರಾಜ್ಯ ಸರ್ಕಾರ ಕೂಡ ಕೇಂದ್ರದ ಕಡೆ ಬೊಟ್ಟು ಮಾಡಿ ತೋರಿಸದೆ ತಮ್ಮ ಪಾಲಿನ ಜವಾಬ್ದಾರಿ ಮೆರೆಯಲಿ. ಕುಂಠಿತವಾದ ಕಾಮಗಾರಿಗೆ ವೇಗ ನೀಡಲಿ ಎಂದು ಲಿಂಗಾರೆಡ್ಡಿ ಒತ್ತಾಯಿಸಿದರು.ರೈತ ಸಂಘದ ಜಿಲ್ಲಾಧ್ಯಕ್ಷ ಹಂಪಯ್ಯನಮಾಳಿಗೆ ಧನಂಜಯ ಮಾತನಾಡಿ,ರೈತರು ನೀರಾವರಿಗಾಗಿ ಹೊಲ ಮನೆ ಕೆಲಸ ಬಿಟ್ಟು ಬಂದು ಬೀದಿಗಿಳಿಯುತ್ತಿದ್ದಾರೆ. ಬರೀ ಹಗರಣಗಳ ಬಗ್ಗೆ ಆರೋಪ ಮತ್ತು ಪ್ರತ್ಯಾರೋಪ ಮಾಡಿಕೊಂಡು ಸರ್ಕಾರಗಳು ಕಾಲ ಕಳೆಯುತ್ತಿವೆ. ಜನರು ತಮ್ಮನ್ನು ಏಕೆ ಆಯ್ಕೆ ಮಾಡಿಕೊಂಡಿದ್ದಾರೆ ಎಂಬ ಪ್ರಜ್ಞೆ ಜನ ಪ್ರತಿನಿಧಿಗಳಿಗೆ ಇರಬೇಕು ಎಂದರು.

ರೈತ ಸಂಘದ ರಾಜ್ಯ ಮುಖಂಡ ಬೇಡರೆಡ್ಡಿಹಳ್ಳಿ ಬಸವರೆಡ್ಡಿ, ಜಿಲ್ಲಾ ಕಾರ್ಯಾಧ್ಯಕ್ಷ ಕೆ.ಸಿ.ಹೊರಕೇರಪ್ಪ, ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ಆರ್. ದಯಾನಂದ್, ಸಂಚಾಲಕ ಚಿಕ್ಕಪ್ಪನಹಳ್ಳಿ ಷಣ್ಮುಖ, ಕರುನಾಡ ವಿಜಯಸೇನೆ ಜಿಲ್ಲಾಧ್ಯಕ್ಷ ಶಿವಕುಮಾರ್, ಮಹಿಳಾ ಘಟಕದ ಅಧ್ಯಕ್ಷ ವೀಣಾಗೌರಣ್ಣನವರ, ರೈತ ಸಂಘದ ಉಪಾಧ್ಯಕ್ಷರುಗಳಾದ ಮಲ್ಲಾಪುರ ತಿಪ್ಪೇಸ್ವಾಮಿ, ಚಿಕ್ಕಪ್ಪನಹಳ್ಳಿ ರುದ್ರಸ್ವಾಮಿ, ಮುದ್ದಾಪುರ ನಾಗಣ್ಣ, ರೈತ ಸಂಘದ ತಾಲೂಕು ಅಧ್ಯಕ್ಷ ಇಸಾಮುದ್ರ ಪ್ರಭು, ತಾಲೂಕು ಕಾರ್ಯದರ್ಶಿ ಸಿದ್ದೇಶ್ ಜಾನುಕೊಂಡ, ಕಾಂತರಾಜ್ ಹುಣಿಸೆಕಟ್ಟೆ, ಜೆ.ಎನ್.ಕೋಟೆ ಓಂಕಾರಪ್ಪ, ಮೊಳಕಾಲ್ಮೂರು ಮಂಜುನಾಥ್, ಚಳ್ಳಕೆರೆ ಹಂಪಣ್ಣ, ತಮಟಕಲ್ಲು ಸಿದ್ದಪ್ಪ, ಕಲ್ಲೇನಹಳ್ಳಿ ಕುಮಾರ್,ಹಿರಿಯೂರುಅಧ್ಯಕ್ಷಬ್ಯಾಡರಹಳ್ಳಿ ಶಿವಕುಮಾರ್, ಮಹಿಳಾ ಘಟಕದ ನಿತ್ಯಶ್ರೀ, ಲಕ್ಷ್ಮಕ್ಕ, ನಗರಸಭೆ ಮಾಜಿ ಸದಸ್ಯ,ಜಿ.ಎನ್.ಲಿಂಗರಾಜ್, ಮುಖಂಡರಾದ ಗೋಪಾಲರೆಡ್ಡಿ, ಲಕ್ಷ್ಮಣರೆಡ್ಡಿ,ಕುಬೇರರೆಡ್ಡಿ, ಡಿ.ಎಸ್.ಹಳ್ಳಿ ತಿಪ್ಪೇಸ್ವಾಮಿ, ನಿವೃತ್ತ ಪ್ರಾಚಾರ್ಯ ಸಂಗೇನಹಳ್ಳಿ ಅಶೋಕ್ ಕುಮಾರ್, ನಿವೃತ್ತ ಡಿವೈಎಸ್ಪಿ ಗಳಾದ ಎನ್.ಆರ್.ಮಹಾಂತರೆಡ್ಡಿ, ಸೈಯದ್ ಇಸಾಕ್, ಪರಿಸರ ಮತ್ತು ವನ್ಯಜೀವ ಸಂರಕ್ಷಣಾ ವೇದಿಕೆಯ ಮಾಲತೇಶ ಅರಸ್ ಚಳವಳಿಯಲ್ಲಿ ಪಾಲ್ಗೊಂಡಿದ್ದರು.

## ವಿದ್ಯುಚ್ಚಕ್ತಿ ನೌಕರರ ಸಂಘಕ್ಕೆ 1.38 ಕೋಟಿ ರೂ ಲಾಭ

» ಚಿತ್ರದುರ್ಗ

ಸಹಕಾರ ಸಂಘದಿಂದ ನೀಡುವ ದೀರ್ಘಾವಧಿ ಸಾಲವನ್ನು ಆಡಳಿತ ಮಂಡಳಿಯು ಹತ್ತು ಲಕ್ಷ ರೂ.ಗಳಿಗೆ ಏರಿಸಿದ್ದು, ಸದಸ್ಯರುಗಳು ಸೌಲಭ್ಯವನ್ನು ಪಡೆದುಕೊಂಡು ಜೀವನ ಮಟ್ಟ ಸುಧಾರಿಸಿಕೊಳ್ಳುವಂತೆ ಸಹಕಾರ ಸಂಘದ ಅಧ್ಯಕ್ಷ ಕೆ.ಪಿ.ಬಸವರಾಜ್ ಕೋರಿದರು. ಕೆ.ಇ.ಬಿ.ಸಮುದಾಯ ಭವನದಲ್ಲಿ ಇತ್ತೀಚೆಗೆ ನಡೆದ ವಿಭಾಗೀಯ ಕರ್ನಾಟಕ ವಿದ್ಯುಚ್ಚಕ್ತಿ ಮಂಡಳಿ ನೌಕರರ ಪತ್ತಿನ ಸಹಕಾರ ಸಂಘ ಚಿತ್ರದುರ್ಗದ 64 ನೇ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದರು.ಚಿತ್ರದುರ್ಗ ವಲಯ ವಿದ್ಯುತ್ ಮುಖ್ಯ ಇಂಜಿನಿಯರ್ ರೋಮರಾಜ್ ಮಾತನಾಡಿ ಚಿತ್ರದುರ್ಗ ಜಿಲ್ಲೆಯವನಾಗಿ 1993 ರಿಂದ ಸಹಕಾರ ಸಂಘದ ಕಾರ್ಯವೈಖರಿಯನ್ನು ನೋಡಿದ್ದೇನೆ. ಪಾರದರ್ಶಕ ಹಾಗೂ ಪ್ರಾಮಾಣಿಕ ಆಡಳಿತದಿಂದಸಹಕಾರಸಂಘಅಭಿವೃದ್ದಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.ಸಹಕಾರ ಸಂಘದ ಕಾರ್ಯದರ್ಶಿ ವೀರೇಶ್ 2023–24 ನೇ ಸಾಲಿನ ವಾರ್ಷಿಕ ವರದಿ ಮಂಡಿಸಿ ಸಹಕಾರ ಸಂಘವು ಸದರಿ ಸಾಲಿನಲ್ಲಿ ಒಂದು ಕೋಟಿ 38 ಲಕ್ಷ ರೂ.ಗಳ ಲಾಭ ಗಳಿಸಿದೆ ಎಂದರು.




ಅಧಿಕಾರಿಗಳಾದ ಮೇಘರಾಜ್, ಮಲ್ಲಿಕಾರ್ಜುನ್, ತಿಮ್ಮಣ್ಣ, ಕಿರಣ್‌ರೆಡ್ಡಿ, ಷಣ್ಮುಖಪ್ಪ, ಮಹೇಶ್, ಶಿವರಾಂ ಹಾಗೂ ಸಂಘದ ಪದಾಧಿಕಾರಿಗಳಾದ ರವಿ, ಆರ್.ರಮೇಶ್,ಸುರೇಶ್‌ಬಾಬು, ಆರ್.ರವಿಕುಮಾರ್, ಉಪಾಧ್ಯಕ್ಷ ಶ್ರೀನಿವಾಸ್ ಮತ್ತು ಸಹಕಾರ ಸಂಘದ ನಿರ್ದೇಶಕರುಗಳು ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿದ್ದರು.

## ಗಣಪತಿ ಯುವಕರ ಬಳಗದಿಂದ ವಿದ್ಯುತ್ ಕಂಬಗಳಿಗೆ ಲೈಟ್ ಅಳವಡಿಕೆ



» ಹೊಸದುರ್ಗ

ಪಟ್ಟಣದ ಶಾಂತಿನಗರ ಬಡಾವಣೆಯಲ್ಲಿ 11 ವರ್ಷಗಳಿಂದ ಹಿಂದೂ ಮಹಾಗಣಪತಿ ಯುವಕರ ತಂಡ ಗಣಪತಿ ಮೂರ್ತಿಯನ್ನು ಕೂರಿಸಿ, ಗಣೇಶೋತ್ಸವ ಆಚರಿಸಿಕೊಂಡು ಬಂದಿದ್ದರು. ಅದರಂತೆಯೇ, ಈ ಬಾರಿ ಹನ್ನೆರಡನೇ ವರ್ಷದ ಗಣೇಶ ಮಹೋತ್ಸವವನ್ನು ಹಮ್ಮಿಕೊಂಡಿದ್ದರು.


ಪುಟ 2


**ಪ್ರಮುಖ ಸುದ್ದಿ**

### ಶಾಸಕ ಟಿ.ರಘುಮೂರ್ತಿ ಭೇಟಿ ಶುಭಾಶಯ ವಿನಿಮಯ

# ಮದೀನ ಮಸೀದಿಯಲ್ಲಿ ಈದ್–ಮಿಲಾದ್ ಸಂಭ್ರಮ

» ಚಳ್ಳಕೆರೆ

ಕಳೆದ ಹಲವಾರು ದಶಕಗಳಿಂದ ಚಳ್ಳಕೆರೆ ತಾಲೂಕು ಶಾಂತಿಯನ್ನು ಕಾಪಾಡುವ ನಿಟ್ಟಿನಲ್ಲಿ ತನ್ನದೇಯಾದ ವಿಶೇಷತೆ ಹೊಂದಿದೆ. ಇಲ್ಲಿನ ಹಿಂದೂ, ಮುಸ್ಲಿಂ ಬಂಧುಗಳು ಯಾವುದೇ ಬೇದಭಾವವಿಲ್ಲದೆ ಸಮಾನತೆಯ ಬದುಕನ್ನು ನಡೆಸಿಕೊಂಡು ಬಂದಿದ್ದಾರೆ. ಎಲ್ಲಾ ಸಮುದಾಯವೂ ವಿಶ್ವಾಸಪಡುವ ಕಾರ್ಯವನ್ನು ಎರಡೂ ಕಡೆಯಿಂದ ನಡೆಯುತ್ತಿದೆ. ಯಾವುದೇ ಸಂದರ್ಭದಲ್ಲೂ ನಿಮ್ಮ ವಿಶ್ವಾಸಕ್ಕೆ ದಕ್ಕೆಯಾಗದಂತೆ ಎಲ್ಲರೂ ಎಲ್ಲರಿಗೂ ಮಾದರಿಯಾಗುವಂತೆ ಜೀವನ ನಡೆಸಿ ಎಂದು ಕ್ಷೇತ್ರದ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ಧಿಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ತಿಳಿಸಿದರು.

ಅವರು, ಸೋಮವಾರ ಗಾಂಧಿನಗರದ ಮದೀನ ಮಸೀದಿಯಲ್ಲಿ ಮುಸ್ಲಿಂ ಬಾಂಧವರೊಂದಿಗೆ ಈದ್–ಮಿಲಾದ್ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು ಮಾತನಾಡಿದರು.



ಇತ್ತೀಚಿನ ದಿನಗಳಲ್ಲಿ ಕೆಲವೆಡೆ ಮಾತ್ರ ಸಣ್ಣ,ಪುಟ್ಟ ಘಟನೆಗಳು ನಡೆದರೂ ಸಹ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಇಲ್ಲಿನ ಹಿಂದೂ, ಮುಸ್ಲಿಂ ಬಂಧುಗಳು ಸಮಾನತೆ, ಸಹೋದರತ್ವಕ್ಕೆ ಹೆಚ್ಚು ಗೌರವ ನೀಡುತ್ತಾ ಬಂದಿದ್ದಾರೆ. ರಾಜಕೀಯ ಕ್ಷೇತ್ರದಲ್ಲೂ ಸಹ ಎಲ್ಲಾ ಸಮುದಾಯವನ್ನು ಸಮಾನತೆಯಿಂದ ನೋಡುವ ದೃಷ್ಟಿಕೋನ ಎಲ್ಲರಿಗೂ ಇರಬೇಕು ಎಂದರು. ಮದೀನ ಮಸೀದಿ ಮುತುವಲ್ಲಿ ಎಂ.ದಾದಾಪೀರ್, ನಗರಸಭೆ ನಾಮಿನಿ ಸದಸ್ಯ ಅನ್ವರ್‌ಮಾಸ್ಟರ್, ಮಾಜಿ ಪುರಸಭಾ ಸದಸ್ಯ ಎಸ್.ಮುಜೀಬ್, ಮಾರ್ಬಲ್‌ಸಲೀಂ, ಜುಬೇರ್, ಸಮುದಾಯದ ಮುಖಂಡರಾದ ಬಿ.ಫರೀದ್‌ಖಾನ್, ರಿಜ್ವಾನ್, ಮಹಮ್ಮದ್‌ಸೈಫುಲ್ಲಾ, ಹಯಾತ್‌ಭಾಷ, ಕೆ.ದಾದಾಪೀರ್, ನಿವೃತ್ತ ಬೆಸ್ಕಾಂ ಅಧಿಕಾರಿ ದಾದಾಪೀರ್ ಮುಂತಾದವರು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ಗಣಪತಿ ಯುವಕರ ಬಳಗದಿಂದ ವಿದ್ಯುತ್ ಕಂಬಗಳಿಗೆ ಲೈಟ್ ಅಳವಡಿಕೆ

» ಮೊದಲ ಪುಟದಿಂದ

ಇದೇ ಸಂದರ್ಭದಲ್ಲಿ ಆರ್ಕೆಸ್ಟ್ರಾ ನಡೆಸಲು ಇಟ್ಟಿದ್ದ ಹಣದಲ್ಲಿ ಆರ್ಕೆಸ್ಟ್ರಾ ಆಯೋಜಿಸದೆ, ತಮ್ಮ ಬಡಾವಣೆಯ ವಿದ್ಯುತ್ ಕಂಬಗಳಿಗೆ ಲೈಟ್ ಗಳನ್ನು ಅಳವಡಿಸುವ ಮೂಲಕ ಮಾದರಿಯಾಗಿದ್ದಾರೆ. ಈ ಬಗ್ಗೆ ಶಾಂತಿನಗರ ಬಡಾವಣೆಯ ಗಣಪತಿ ಯುವಕ ಸಂಘದ ಸಂಚಾಲಕ ಗೋಪಾಲ್ ಮಾತನಾಡಿ, 12 ವರ್ಷಗಳಿಂದಲೂ ಕೂಡ ಗಣೇಶ ಮಹೋತ್ಸವವನ್ನು ಆಚರಿಸಿಕೊಂಡು ಬಂದಿದ್ದೇವೆ. ಇದೇ ಸಂದರ್ಭದಲ್ಲಿ ಗೋಪಾಲ್, ರಂಗನಾಥ್, ಶಶಿಧರ, ಮಂಜುನಾಥ, ತುಳಸಿ ನಾಗ ಮತ್ತು ಯುವರಾಜ್ ಸೇರಿದಂತೆ ಸಂಘದ ಹಲವು ಯುವಕರಿದ್ದರು.

### ಸೈನಿಕ ಶಾಲೆಗಳಲ್ಲಿ ಭರ್ಜರಿ 8000 ಕ್ಕೂ ಹೆಚ್ಚು ಬೋಧಕರ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನ

» ನಮ್ಮಜನ ಉದ್ಯೋಗ ಸಮಾಚಾರ

ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸೇನಾ ಸಿಬ್ಬಂದಿಗಳ ಮಕ್ಕಳ ಶಿಕ್ಷಣಕ್ಕಾಗಿ ಇರುವಂತಹ ಆರ್ಮಿ ವೆಲ್ಫೇರ್ ಎಜುಕೇಶನ್ ಸೊಸೈಟಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್ಮಿ ಸ್ಕೂಲ್ ಗಳಲ್ಲಿ ಖಾಲಿ ಇರುವ ಟೀಚರ್ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ದೇಶಾದ್ಯಂತ ಒಟ್ಟು 139 ಆರ್ಮಿ ಸ್ಕೂಲ್ ಗಳಿದ್ದು, ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಬೆಳಗಾವಿ ಜಿಲ್ಲೆಯಲ್ಲಿ ಈ ಶಾಲೆ ಇದೆ. ಈ ಶಾಲೆಗಳಲ್ಲಿ ಒಟ್ಟು ಸದ್ಯಕ್ಕೆ 8,000ಕ್ಕೂ ಹೆಚ್ಚು ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

**ನೇಮಕಾತಿ ಮಾಡಿಕೊಳ್ಳುತ್ತಿರುವ ಹುದ್ದೆಗಳ ವಿವರ :**

- **ಪ್ರೈಮರಿ ಟೀಚರ್ ಹುದ್ದೆಗಳು**
- **ಪೋಸ್ಟ್ ಗ್ರಾಜುಯೇಟ್ ಟಿಚರ್**
- **ಟ್ರೈನಡ್ ಗ್ರಾಜುಯೇಟ್ ಟಿಚರ್**

**ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇರುವ ಅರ್ಹತೆಗಳೇನು?:** ಪೋಸ್ಟ್ ಗ್ರಾಜುವೇಟ್ ಟೀಚರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಪದವಿ ಶಿಕ್ಷಣದ ಜೊತೆಗೆ ಬಿಎಡ್ ಪದವಿ ಮುಗಿಸಿರಬೇಕು. ಪ್ರೈಮರಿ ಟೀಚರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಕೂಡ ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಬಿಎಡ್ ಕೋರ್ಸ್ ನಲ್ಲಿ ಶೇಕಡ 50ರಷ್ಟು ಅಂಕಗಳೊಂದಿಗೆ ಪಾಸಾಗಿರಬೇಕು. ಇದರ ಜೊತೆಗೆ ಅಭ್ಯರ್ಥಿಗಳು ಸಿ ಟಿ ಇ ಟಿ ಅಥವಾ ಟಿಇಟಿ ಅರ್ಹತೆ ಹೊಂದಿರಬೇಕು.

**ವಯೋಮಿತಿ ಅರ್ಹತೆಗಳು:** ಈ ನೇಮಕಾತಿಗೆ ಹೊಸದಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನಿಷ್ಠ 40 ವರ್ಷದ ಒಳಗಿರಬೇಕು ಮತ್ತು ಸೇವಾನುಭವ ಹೊಂದಿರುವ ಅಭ್ಯರ್ಥಿಗಳು ಗರಿಷ್ಠ 57 ವರ್ಷದ ಒಳಗಿರಬೇಕು.

**ಹುದ್ದೆಗಳಿಗೆ ನೇಮಕಾತಿ ಹೇಗೆ ಮಾಡಿಕೊಳ್ಳಲಾಗುತ್ತದೆ?:** ಅರ್ಜಿ ಸಲ್ಲಿಸಿದಂತಹ ಅಭ್ಯರ್ಥಿಗಳಿಗೆ ಮೊದಲು ಆನ್ಲೈನ್ ಸ್ಕ್ರೀನಿಂಗ್ ಟೆಸ್ಟ್ ನಡೆಸಿ ಇದರಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ಸಂದರ್ಶನ ನಡೆಸಿ ನಂತರದಲ್ಲಿ ಬೋಧನಾ ಪರೀಕ್ಷೆ ನಡೆಸುತ್ತಾರೆ. ಇವುಗಳಲ್ಲಿ ಉತ್ತಮ ಅಂಕ ಗಳಿಸಿದ ಅಭ್ಯರ್ಥಿಗಳನ್ನು ಅಂಕಗಳ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು.

**ನೇಮಕಾತಿಗೆ ಅರ್ಜಿ ಸಲ್ಲಿಸಲು ಪ್ರಮುಖ ದಿನಾಂಕಗಳು:** ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅಕ್ಟೋಬರ್ 25, 2024 ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳು ನಾವು ಕೆಳಗೆ ನೀಡಿರುವ ಜಾಲತಾಣಕ್ಕೆ ಭೇಟಿ ನೀಡಿ ಅಲ್ಲಿ ಸಿಗುವಂತಹ ಅಧಿಕೃತ ಅಧಿಸೂಚನೆಯನ್ನು ಮತ್ತೊಮ್ಮೆ ನೋಡಿಕೊಂಡು ಸಂಪೂರ್ಣ ಮಾಹಿತಿಯನ್ನು ತಿಳಿದು ಅರ್ಜಿ ಸಲ್ಲಿಸಿ. ಅಧಿಕೃತ ಅಧಿಸೂಚನೆ ಮತ್ತು ಅರ್ಜಿ ಸಲ್ಲಿಕೆಯ ಲಿಂಕ್ : https://www.awesindia.com/

### ಈದ್ ಮಿಲಾದ್ ವೇಳೆ ಪ್ಯಾಲೆಸ್ತೀನ್ ಪರ ಘೋಷಣೆ

» ಚಿತ್ರದುರ್ಗ

ಇಂದು ಮುಸ್ಲಿಂ ಸಮುದಾಯದಿಂದ ಈದ್ ಮಿಲಾದ್ ಆಚರಣೆ ಹಿನ್ನೆಲೆ ಕೋಟೆನಾಡು ಚಿತ್ರದುರ್ಗ ನಗರದಲ್ಲಿ ಬಡಾಮಖಾನ್ ಬಳಿಯಿಂದ ಈದ್ ಮಿಲಾದ್ ಮೆರವಣಿಗೆ ಮಾಡಲಾಗಿದೆ. ಈ ವೇಳೆ ಪ್ಯಾಲೆಸ್ತೀನ್ ಪರ ಘೋಷಣೆ ಕೂಗಿರುವಂತಹ ಘಟನೆ ನಡೆದಿದೆ. ಚಿತ್ರದುರ್ಗ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಈದ್ ಮಿಲಾದ್ ಮೆರವಣಿಗೆ ವೇಳೆ ಪ್ಯಾಲೆಸ್ತೀನ್ ಪರ ಘೋಷಣೆ ಕೂಗಿರುವಂತಹ ಘಟನೆ ನಗರದ ಗಾಂಧಿ ವೃತ್ತದ ಬಳಿ ನಡೆದಿದೆ. ಮೆರವಣಿಗೆಯಲ್ಲಿ ಕೆಲವರಿಂದ ಪ್ಯಾಲೆಸ್ತೀನ್ ಜಿಂದಾಬಾದ್ ಘೋಷಣೆ ಕೂಗಿದ್ದಾರೆ. ಈ ವೇಳೆ ಎಚ್ಚರಿಕೆ ನೀಡಿದ ಪೊಲೀಸರು ಎರಡು ಧ್ವಜ ವಶಕ್ಕೆ ಪಡೆದುಕೊಂಡಿದ್ದಾರೆ. ಚಿತ್ರದುರ್ಗ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಈದ್ ಮಿಲಾದ್ ಮೆರವಣಿಗೆ ಹಿನ್ನೆಲೆ ಮುಂಜಾಗ್ರತೆ ಕ್ರಮವಾಗಿ ನಗರದೆಲ್ಲೆಡೆ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು.

---

**ಬ್ರಿಟೀಷರ ಜೊತೆ ನಮ್ಮವರೇ ಕೈಜೋಡಿಸಿದ್ದರಿಂದಲೇ 200 ವರ್ಷ ಗುಲಾಮಗಿರಿ ಅನುಭವಿಸಿದೆವು: ಸಿದ್ದರಾಮಯ್ಯ**

**ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್ ಯಡಿಯೂರಪ್ಪ ನನ್ನನ್ನು ಮುಗಿಸ್ತೀನಿ ಅಂದುಕೊಂಡಿದ್ದರೆ ಅದು ಅವರ ಮೂರ್ಖತನ: ಸಿ.ಎಂ**

# ನನ್ನನ್ನು ಅಷ್ಟು ಸುಲಭ ಅಂದುಕೊಳ್ಳಬೇಡಿ


» ಕಲಬುರಗಿ

ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್ ಯಡಿಯೂರಪ್ಪ ನನ್ನನ್ನು ಮುಗಿಸ್ತೀನಿ ಅಂದುಕೊಂಡಿದ್ದರೆ ಅದು ಅವರ ಮೂರ್ಖತನ. ನನ್ನನ್ನು ಅಷ್ಟು ಸುಲಭ ಅಂದುಕೊಳ್ಳಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಃಏಕ ಮತ್ತು ಎಆಖ ನಾಯಕರಿಗೆ ನೇರ ಸವಾಲೆಸೆದರು.

ಕಲಬುರಗಿ ತಾಲ್ಲೂಕಿನ ಕವಲಗಿ (ಕೆ) ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ಜಯಂತೋತ್ಸವವನ್ನು ಉದ್ಘಾಟಿಸಿ ರಾಯಣ್ಣ ಪ್ರತಿಮೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಬ್ರಿಟೀಷರ ಜೊತೆ ನಮ್ಮವರು ಕೈಜೋಡಿಸಿದ್ದರಿಂದಲೇ 200 ವರ್ಷ ಗುಲಾಮಗಿರಿ ಅನುಭವಿಸಿದೆವು. ಸಂಗೊಳ್ಳಿ ರಾಯಣ್ಣನನ್ನು ಬ್ರಿಟೀಷರಿಗೆ ಹಿಡಿದುಕೊಟ್ಟವರು ನಮ್ಮವರೇ ಆದ ಮನೆ ಮುರುಕರು. ನಮ್ಮ ಸಮಾಜದಲ್ಲೇ ಇಂಥಹ ಮನೆ ಮುರುಕರು ಹಿಂದೆಯೂ ಇದ್ದರು. ಮುಂದೆಯೂ ಇರುತ್ತಾರೆ. ಇಂಥವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದರು.

ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಬಡವರ, ಮಧ್ಯಮ ವರ್ಗದವರ ಕಲ್ಯಾಣಕ್ಕೆ ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದಕ್ಕೆ ಪಟ್ಟಭದ್ರರು ಷಡ್ಯಂತ್ರ ನಡೆಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



40 ವರ್ಷದಿಂದ ಸಣ್ಣ ತಪ್ಪು ಮಾಡದವನು ಈಗ ಮಾಡ್ತೀನಾ? ಹಿಂದೆಯೂ ಮಾಡಿಲ್ಲ, ಮುಂದೆಯೂ ಮಾಡಲ್ಲ.

ಮುಡಾ ಪ್ರಕರಣದಲ್ಲಿ ಏನೇನೂ ಇಲ್ಲ. ಆದರೂ BJP, JDS ನಾಯಕರು ಡೆಲ್ಲಿಯಿಂದ ರಾಜಭವನದವರೆಗೂ ಪಿತೂರಿ ಹೆಣೆಯುತ್ತಿದ್ದಾರೆ. ಇದರಲ್ಲಿ ಅವರು ಯಶಸ್ವಿ ಆಗಲು ಬಿಡಬಾರದು.

ಸಂಗೊಳ್ಳಿರಾಯಣ್ಣನ ಹೋರಾಟದ ಕಿಚ್ಚು ನಮ್ಮೊಳಗಿದೆ ಎಂದು ಎಚ್ಚರಿಸಿದರು.

ಡಾ.ಬಾಬಾ ಸಾಹೇಬರು ಕೊಟ್ಟ ಸಂವಿಧಾನದಿಂದಾಗಿ ನಾನು ಮುಖ್ಯಮಂತ್ರಿ ಆಗಿದ್ದೇನೆ. ಬಾಬಾ ಸಾಹೇಬರ ಆಶಯದಂತೆ ನಾನು ಎಲ್ಲಾ ಜಾತಿ, ಜನ ವರ್ಗಗಳಿಗೆ, ಮಹಿಳೆಯರಿಗೆ ಆರ್ಥಿಕ ಶಕ್ತಿ ನೀಡುತ್ತಿದ್ದೇನೆ ಎಂದರು.

ದೇಶದಲ್ಲಿ ಆಹಾರ ಭದ್ರತೆ ಕಾಯ್ದೆ ಜಾರಿಗೆ ಬಂದಿದ್ದು ಕಾಂಗ್ರೆಸ್ ಅವಧಿಯಲ್ಲಿ. ನಾವು ನಮ್ಮ ಜನರಿಗೆ 5 ಕೆಜಿ ಹೆಚ್ಚುವರಿ ಅಕ್ಕಿ ಕೊಡಬೇಕು ಎಂದು ತೀರ್ಮಾನಿಸಿದರೆ ನರೇಂದ್ರ ಮೋದಿಯವರು ಅಕ್ಕಿ ಕೊಡಲು ಬಿಡಲಿಲ್ಲ. ಅದಕ್ಕಾಗಿ ನಾವು ಅಕ್ಕಿ ಬದಲಿಗೆ 5ಇರ ಅಕ್ಕಿಯ ಹಣ ಕೊಡುತ್ತಿದ್ದೇವೆ ಎಂದರು.

ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ನಾನು ಕೊಡುತ್ತಿರುವುದರಿಂದ ನನ್ನನ್ನು ಮುಗಿಸಲು ಯತ್ನಿಸುತ್ತಿದ್ದಾರೆ. ಅವರ ಯತ್ನ ಸಕ್ಸಸ್ ಆಗಲು ಬಿಡಬೇಡಿ ಎಂದು ಕರೆ ನೀಡಿದರು.

ಪಟ್ಟಭದ್ರ ಹಿತಾಸಕ್ತಿಗಳೇ ರಾಯಣ್ಣನನ್ನು ಬ್ರಿಟಿಷರಿಗೆ ಹಿಡಿದುಕೊಟ್ಟರು, ಬಸವಣ್ಣನವರನ್ನು ಆಸ್ಥಾನದಿಂದ ಓಡಿಸಿಬಿಟ್ಟರು. ಹೀಗಾಗಿ ಈ ಃಏಕ ಮತ್ತು ಎಆಖ ನವರ ಬಗ್ಗೆ ಎಚ್ಚರದಿಂದ ಇರಿ ಎಂದು ಕರೆ ನೀಡಿದರು.

ನಾನು ಹಿಂದುಳಿದ ಸಮಾಜದಲ್ಲಿ ಜನಿಸಿ ಬಡತನ ಅಂದರೆ ಏನು, ಗ್ರಾಮಗಳ ಸ್ಥಿತಿ ಹೇಗಿದೆ ಎಂದು ಅರ್ಥಮಾಡಿಕೊಂಡಿದ್ದೇನೆ. ಬಡತನ ಹೋಗಲಾಡಿಸಲು ಕಾರ್ಯಕ್ರಮ ರೂಪಿಸುತ್ತಿದ್ದೇನೆ ಎಂದರು.

ಕಲಬುರಗಿಯ ಕವಲಗಿಯ 14 ಹಳ್ಳಿಗಳಿಗೆ ಅನುಕೂಲ ಆಗುವ ಏತ ನೀರಾವರಿ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಶಾಸಕರಾದ ಎಂ.ವೈ.ಪಾಟೀಲರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಚಿವರಾದ ಬೈರತಿ ಸುರೇಶ್, ಶರಣ ಪ್ರಕಾಶ್ ಪಾಟೀಲ್, ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರರಾದ ಬಿ.ಆರ್.ಪಾಟೀಲ್, ಮಾಲೀಕಯ್ಯ ಗುತ್ತೇದಾರ್ ಸೇರಿದಂತೆ ಜಿಲ್ಲೆಯ ಶಾಸಕರು, ಸಮುದಾಯದ ಮುಖಂಡರುಗಳು ಉಪಸ್ಥಿತರಿದ್ದರು.

ಕಾರ್ಯಕ್ರಮ ತಿಂಥಣಿ ಕಾಗಿನೆಲೆ ಪೀಠದ ಜಗದ್ಗುರು ಸಿದ್ದರಾಮಾನಂದಪುರಿ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

---

**ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ**

## ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಪೂರಕ ಚರ್ಚೆ

» ಕಲಬುರಗಿ

ಕಲ್ಯಾಣಕರ್ನಾಟಕದಭಾಗವಾದಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಲಾಗುತ್ತಿದ್ದು, ಈ ಭಾಗದ ಅಭಿವೃದ್ಧಿಗಾಗಿ ಪೂರಕ ಚರ್ಚೆ ಹಾಗೂ ತೀರ್ಮಾನಗಳನ್ನು ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಕಲಬುರಗಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು.ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ರೂಪಿಸಲಾಗಿರುವ ಯೋಜನೆ ಗಳು ಹಾಗೂ ಇನ್ನಿತರ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲಾಗುವುದು.

ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿನ ಜನರಿಗೆ ಉದ್ಯೋಗಾವಕಾಶಗಳ ಬಗ್ಗೆ ಹಾಗೂ ಪ್ರತ್ಯೇಕ ಸಚಿವಾಲಯ ರಚನೆ ಬಗ್ಗೆಯೂ ಚರ್ಚಿಸಲಾಗುವುದು. ಕಾಂಗ್ರೆಸ್ ಸರ್ಕಾರ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಯ ಪರವಾಗಿದೆ ಎಂದರು.

**371 ಜೆ ಜಾರಿಗೆ ತಂದಿದ್ದು ಕಾಂಗ್ರೆಸ್ ಸರ್ಕಾರ:** ಮನಮೋಹನ್‌ಸಿಂಗ್‌ನೇತೃತ್ವದಕೇಂದ್ರಸರ್ಕಾರದ ಅವಧಿಯಲ್ಲಿ 371 ಜೆ ಕಾನೂನು ತರಲಾಗಿದ್ದು,, ಇದಕ್ಕಾಗಿ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ಮಾಜಿಮುಖ್ಯಮಂತ್ರಿ ಧರಂಸಿಂಗ್ ಅವರು ಶ್ರಮವಹಿಸಿದ್ದರು. 2013 ರಲ್ಲಿ ಈ ಕಾನೂನನ್ನು ಕರ್ನಾಟಕದಲ್ಲಿ ಜಾರಿಗೆ ತರಲು ಕಾಂಗ್ರೆಸ್ ಸರ್ಕಾರ ಪ್ರಯತ್ನಿಸಿತೇ ಹೊರತು ಬಿಜೆಪಿಯವರಲ್ಲ. ವಾಜಪೇಯಿಯವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಈ ಕಾನೂನನ್ನು ಜಾರಿಗೆ ತರಲು ತಿರಸ್ಕರಿಸಿದ್ದರು ಎಂದರು.



**ಕಲ್ಯಾಣ ಕರ್ನಾಟಕಕ್ಕೆ 5000 ಕೋಟಿ ಅನುದಾನ:** ಕಾಂಗ್ರೆಸ್ ಸರ್ಕಾರದ ಮೇಲೆ ಕಲ್ಯಾಣ ಕರ್ನಾಟಕ ಭಾಗದ ಜನರ ನಿರೀಕ್ಷೆಯಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಬಡವರ ಪರವಾದ ಸರ್ಕಾರ ನಮ್ಮದು. ಆದ್ದರಿಂದ ಈ ಭಾಗದ ಅಭಿವೃದ್ಧಿಗಾಗಿ 5000 ಕೋಟಿ ರೂ.ಗಳನ್ನು ನೀಡಲಾಗಿದೆ ಎಂದರು.

**ನಾಗಮಂಗಲ ಪ್ರಕರಣ- ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಅಮಾನತ್ತು:** ಮಂಡ್ಯ ಜಿಲ್ಲೆಯ ನಾಗಮಂಗಲದ ಗಲಭೆ ಪ್ರಕರಣದ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸುತ್ತಾ, ನಾಗಮಂಗಲ ಶಾಂತವಾಗಿದೆ. ಗಲಭೆ ಪ್ರಕರಣಕ್ಕೆ ಪೊಲೀಸರ ಕರ್ತವ್ಯ ವೈಫಲ್ಯವ ಕಾರಣವೆಂದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಸಂಬಂಧಪಟ್ಟ ಉಪಪೊಲೀಸ್ ವರಿಷ್ಠಾಧಿಕಾರಿ ಹಾಗೂ ಇನ್ಸ್ ಪೆಕ್ಟರ್ ನ್ನು ಅಮಾನತ್ತುಗೊಳಿಸಲಾಗಿದೆ. ಈ ಪ್ರಕರಣದಲ್ಲಿ ಹಾನಿಗೊಳಗಾದ ಅಂಗಡಿ ಮುಂಗಟ್ಟು, ವಾಹನಗಳಿಗೆ ಪರಿಹಾರ ನೀಡುವ ಬಗ್ಗೆ ಕ್ರಮ ವಹಿಸಲಾಗುವುದು ಎಂದರು.



**ಜಾತಿ ನಿಂದನೆ ಪ್ರಕರಣದಲ್ಲಿ ಮಾಜಿ ಸಚಿವ ಮುನಿರತ್ನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒಕ್ಕಲಿಗ ಸಮುದಾಯದ ಸಚಿವರು ಹಾಗೂ ಶಾಸಕರು ಇಂದು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.**

---

## ಶಿವಶಕ್ತಿ ಸೌಹಾರ್ದ ಸಹಕಾರಿ ಸಂಘ ದ್ವಿತೀಯ ವಾರ್ಷಿಕೋತ್ಸವ: 10 ಲಕ್ಷ ಹೆಚ್ಚು ಲಾಭ : ಕೆ.ಸಿ.ವೀರೇಶ್.



» ಚಳ್ಳಕೆರೆ

ನಗರದ ವಾಣಿಜ್ಯೋದ್ಯಮವೂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವ್ಯಾಪಾರ ವಹಿವಾಟು ನಡೆಸುವ ವ್ಯಾಪಾರಸ್ಥರು ಹಾಗೂ ಇತರೆ ವರ್ಗದವರಿಗೆ ಸಣ್ಣ ಪ್ರಮಾಣದ ಆರ್ಥಿಕ ನೆರವು ಒದಗಿಸುವನಿಟ್ಟಿನಲ್ಲಿ ಚಳ್ಳಕೆರೆ ಶಿವಶಕ್ತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಯಶಸ್ವಿ ಹೆಜ್ಜೆ ಇಟ್ಟಿದೆ ಎಂದು ಅಧ್ಯಕ್ಷ ಕೆ.ಸಿ.ವೀರೇಶ್ ತಿಳಿಸಿದರು.

ಅವರು, ಖಾಸಗಿ ಬಸ್ ನಿಲ್ದಾಣದ ಎಸ್.ಆರ್, ಕನೆನ್ಷನ್ ಹಾಲ್‌ನಲ್ಲಿ ಸಂಘದ ದ್ವಿತೀಯ ವರ್ಷದ ಸರ್ವಸದಸ್ಯರ ಮಹಾಸಭೆಯನ್ನು ಉದ್ಘಾಟಿಸಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಳೆ ವರ್ಷ ಆರಂಭವಾದ ನಮ್ಮ ಸೌಹಾರ್ದ ಸಹಕಾರಿ ಸಂಘ ಎರಡನೇ ವರ್ಷಕ್ಕೆ ಕಾಲಿಟ್ಟಿದೆ. ಎರಡನೇ ವರ್ಷದಲ್ಲಿ ನಿರೀಕ್ಷೆಗೂ ಮೀರಿ ಹೆಚ್ಚು ಲಾಭ ದಾಖಲಿಸುವಲ್ಲಿ ಸಂಘ ಯಶಸ್ವಿಯಾಗಿದೆ. ಪ್ರಸ್ತುತ 2023-24ರ ಅವಧಿಯಲ್ಲಿ ಸಂಘ 10,14,518 ಲಾಭ ಗಳಿಸಲು ಸಾಧ್ಯವಾಗಿದೆ. ಬ್ಯಾಂಕ್‌ನ ಸರ್ವತೋಮುಖ ಅಭಿವೃದ್ದಿಗೆ ಉಪಾಧ್ಯಕ್ಷರು, ಎಲ್ಲಾ ನಿರ್ದೇಶಕರು ಬ್ಯಾಂಕ್‌ನ ಸಿಬ್ಬಂದಿ ವರ್ಗ ಸಕರಾತ್ಮಕವಾಗಿ ಸ್ಪಂದಿಸಿದೆ. ಈ ಹಿನ್ನೆಲೆಯಲ್ಲಿ ಲಾಭವನ್ನು ಹೆಚ್ಚು ಪಡೆಯಲು ಸಾಧ್ಯವಾಯಿರು ಎಂದರು. ವ್ಯವಸ್ಥಾಪಕ ಟಿ.ಮಾರುತಿಪ್ರಸಾದ್ ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ಶಿವಶಕ್ತಿ ಸೌಹಾರ್ದ ಸಹಕಾರಿ ಉತ್ತಮ ಲಾಭವನ್ನು ಗಳಿಸುವ ನಿಟ್ಟಿನಲ್ಲಿ ಸಾಕಷ್ಟು ಪರಿಶ್ರಮ ವಹಿಸಿದೆ. ಆರ್ಥಿಕ ಕ್ಷೇತ್ರವನ್ನು ಬಲಪಡಿಸಲು ಬ್ಯಾಂಕ್‌ಗಳೇ ಆಧಾರವಾಗಿವೆ. ಬ್ಯಾಂಕ್‌ನ ನೆರವು ಪಡೆಯದೆ ಅಭಿವೃದ್ಧಿ ಮಾಡಲು ಸಾಧ್ಯವಾಗದು. ಆದ್ದರಿಂದ ಬ್ಯಾಂಕ್ ನಿಮ್ಮೆಲ್ಲರ ಶುಭಹಾರೈಕೆಯಂತೆ ಎರಡನೇ ವರ್ಷದಲ್ಲೇ 10 ಲಕ್ಷಕ್ಕೂ ಹೆಚ್ಚು ಲಾಭವನ್ನು ದಾಖಲಿಸಿದೆ ಎಂದರು. ಉಪಾಧ್ಯಕ್ಷ ಎಂ.ಜೆ.ರಾಘವೇಂದ್ರ, ನಿರ್ದೇಶಕರಾದ ಭಾಸ್ಕರ್‌ರಾವ್‌ಗಾಯಕವಾಡ್, ಈ.ಕೆ.ಸುಧಾಮಣಿ, ಎನ್.ಎಚ್.ರಾಜು, ಕುಂದೂರುಮಹಂತೇಶ್, ಟಿ.ಮಂಜುನಾಥ, ಸಿ.ವಿ.ರಮೇಶ್, ಎಚ್.ದೀಪಾ, ಎನ್.ಶ್ವೇತಾ, ಕೆ.ಪಿ.ಶಿವಲಿಂಗಪ್ಪ, ನವೀನ್‌ಗಾಯಕವಾಡ್, ಕೆ.ಸಿ.ರಾಘವೇಂದ್ರ, ಸಿಬ್ಬಂದಿಯಾದ ಕೆ.ಸಹನ, ಎ.ಸತೀಶ್‌ಬಾಬು ಮುಂತಾದವರು ಭಾಗವಹಿಸಿದ್ದರು.

---

**ಪ್ರಮುಖ ಸುದ್ದಿ**

# ಹರಿಹರ ಕೋರ್ಟ್‌ಲ್ಲಿ 37,709 ಪ್ರಕರಣ ರಾಜಿ ಇತ್ಯರ್ಥ

» ಹರಿಹರ

ನಗರದ ನ್ಯಾಯಾಲಯಗಳ ಸಂಕೀರ್ಣದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ವಿಚಾರಣೆಗೆ ಬಾಕಿ ಇದ್ದ 134 ಮತ್ತು ವ್ಯಾಜ್ಯ ಪೂರ್ವದ 37,575 ದಾವೆ ಸೇರಿ ಒಟ್ಟು 9.98 ಕೋ.ರೂ. ಮೊತ್ತದ, 37,709 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ಹರಿಹರ ಹಿರಿಯ ಸಿವಿಲ್ ನ್ಯಾಯಾಧೀಶರಾದ ಪದ್ಮಶ್ರೀ ಮುನ್ನೋಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದ್ದ ಒಟ್ಟು 2,755 ಪ್ರಕರಣಗಳಲ್ಲಿ, 353 ಪ್ರಕರಣಗಳನ್ನು ಲೋಕ ಅದಾಲತ್ ಗೆ ನಿಗಧಿಪಡಿಸಲಾಗಿತ್ತು. ಇವುಗಳಲ್ಲಿ 47.95 ಲಕ್ಷ ರೂ. ಮೌಲ್ಯದ 27 ಪ್ರಕರಣಗಳು ಇತ್ಯರ್ಥವಾಗಿವೆ. ವ್ಯಾಜ್ಯ ಪೂರ್ವದ 37 ಪ್ರಕರಣಗಳಲ್ಲಿ 2.5 ಲಕ್ಷ ಮೌಲ್ಯದ 2 ಪ್ರಕರಣಗಳು ಇತ್ಯರ್ಥವಾಗಿವೆ.

ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದ್ದ ಒಟ್ಟು 1,156 ಪ್ರಕರಣಗಳಲ್ಲಿ, 890 ಪ್ರಕರಣಗಳನ್ನು ಲೋಕ ಅದಾಲತ್‌ಗೆ ನಿಗಧಿಪಡಿಸಲಾಗಿತ್ತು. ಇವುಗಳಲ್ಲಿ 9.6 ಲಕ್ಷ ರೂ. ಮೌಲ್ಯದ 33 ಪ್ರಕರಣಗಳು ಇತ್ಯರ್ಥವಾಗಿವೆ. ವ್ಯಾಜ್ಯ ಪೂರ್ವದ 12,844 ಪ್ರಕರಣಗಳಲ್ಲಿ 3.01 ಕೋ.ರೂ. ಮೌಲ್ಯದ 12,528 ಪ್ರಕರಣಗಳ ಇತ್ಯರ್ಥವಾಗಿವೆ.1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದ್ದ ಒಟ್ಟು 2,373 ಪ್ರಕರಣಗಳಲ್ಲಿ, 1,096 ಪ್ರಕರಣಗಳನ್ನು ಲೋಕ ಅದಾಲತ್‌ಗೆ ನಿಗಧಿಪಡಿಸಲಾಗಿತ್ತು. ಇವುಗಳಲ್ಲಿ 16 ಲಕ್ಷ ರೂ. ಮೌಲ್ಯದ 45 ಪ್ರಕರಣಗಳು ಇತ್ಯರ್ಥವಾಗಿವೆ. ವ್ಯಾಜ್ಯ ಪೂರ್ವದ 12,835 ಪ್ರಕರಣಗಳಲ್ಲಿ 3.04 ಕೋ.ರೂ. ಮೌಲ್ಯದ 12,520 ಪ್ರಕರಣ ಇತ್ಯರ್ಥವಾಗಿವೆ.2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದ್ದ ಒಟ್ಟು 1,140 ಪ್ರಕರಣಗಳಲ್ಲಿ, 1,066 ಪ್ರಕರಣಗಳನ್ನು ಲೋಕ ಅದಾಲತ್‌ಗೆ ನಿಗಧಿಪಡಿಸಲಾಗಿತ್ತು. ಇವುಗಳಲ್ಲಿ 7.16 ಲಕ್ಷ ರೂ. ಮೌಲ್ಯದ 29 ಪ್ರಕರಣಗಳು ಇತ್ಯರ್ಥವಾಗಿವೆ. ವ್ಯಾಜ್ಯ ಪೂರ್ವದ 12,839 ಪ್ರಕರಣಗಳಲ್ಲಿ 3.08 ಕೋ.ರೂ. ಮೌಲ್ಯದ 12,525 ಪ್ರಕರಣ ಇತ್ಯರ್ಥವಾಗಿವೆ.



ರಾಷ್ಟ್ರೀಯ ಲೋಕ ಅದಾಲತ್ ನಡೆಯುವ ವೇಳೆ ನ್ಯಾಯಾಧೀಶರಾದ ವೀಣಾ ಕೋಳೇಕರ, ಜ್ಯೋತಿ ಅಶೋಕ ಪತ್ತಾರ ಮತ್ತು ಹಿರಿ-ಕಿರಿಯ ವಕೀಲರು, ಬಹಳಷ್ಟು ಜನ ಕಕ್ಷಿದಾರರು ಭಾಗವಹಿಸಿದ್ದರು.

**ಅನಾರೋಗ್ಯಕ್ಕೆ ತುತ್ತಾಗಿದ್ದ ವ್ಯಕ್ತಿಗೆ ನೆರವು ;** ಅದಾಲತ್‌ಗೆ ಆಗಮಿಸಿದ್ದ ಕಕ್ಷಿಗಾರರಲ್ಲಿ ಅನಾರೋಗ್ಯಕ್ಕೆ ತುತ್ತಾಗಿದ್ದ ವ್ಯಕ್ತಿಯೊಬ್ಬನ ಸಂಕಷ್ಟವನ್ನು ಆಲಿಸಿದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ,ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಕರೆಣ್ಣನವರ್, ರಾಜಿ ಸಂಧಾನದ ಮೂಲಕ ಆತನ ಮೇಲಿದ್ದ ಸಾಲದ ಹೊರೆಯನ್ನು ಇಳಿಸಿದ ಘಟನೆ ನಡೆಯಿತು. ಕೆನರಾ ಬ್ಯಾಂಕ್‌ನಲ್ಲಿ 8.18 ಲಕ್ಷ ಸಾಲ ಪಡೆದಿದ್ದ ತಾಲ್ಲೂಕಿನ ಬನ್ನಿಕೋಡು ಗ್ರಾಮದ ಕಾಡಸಿದ್ದಪ್ಪ ಎಂಬುವರು ಪಾರ್ಶ್ವವಾಯು ವಿಗೆ ತುತ್ತಾಗಿದ್ದರಿಂದ ಸಾಲ ತೀರಿಸಲಾಗಿರಲಿಲ್ಲ. ಅವರ ವಿರುದ್ಧ ಸಾಲ ವಸೂಲಾತಿಗೆ ದಾಖಲಿಸಿದ್ದ ಪ್ರಕರಣದಲ್ಲಿ ಬ್ಯಾಂಕಿನ ಪ್ರಾದೇಶಿಕ ವ್ಯವಸ್ಥಾಪಕರಿಗೆ ಕಾಡಸಿದ್ದಪ್ಪನ ಅಸಹಾಯಕತೆ ವಿವರಿಸಿದ ಕರೆಣ್ಣನವರ್ ಸಹಕರಿಸುವಂತೆ ಕೇಳಿದ್ದರಿಂದ 1.35 ಲಕ್ಷ ರೂ.ಗೆ ಪ್ರಕರಣ ರಾಜಿಯಾಯ್ತು.

## ಫಾಸ್ಟ್ ನ್ಯೂಸ್

### ಒಂಬತ್ತು ಅಡಿ ಉದ್ದದ ಹೆಬ್ಬಾವನ್ನು ಸೆರೆ



» ದಾವಣಗೆರೆ

ನ್ಯಾಮತಿ ತಾಲೂಕಿನ ನರಿಗಿನ ಕೆರೆ ಗ್ರಾಮದ ಮನೆಯೊಂದರ ಹಿತ್ತಲಿನಲ್ಲಿ ಕಾಣಿಸಿಕೊಂಡ 9 ಅಡಿ ಉದ್ದದ ಹೆಬ್ಬಾವನ್ನು ಅರಣ್ಯ ಇಲಾಖೆ ಸಿಬ್ಬಂದಿ ಶುಕ್ರವಾರ ಸೆರೆ ಹಿಡಿದು ಗಂಗವ್ವ ಸರ ಮೀಸಲು ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ.ನರಿಗಿನ ಕೆರೆ ಗ್ರಾಮದ ಚಂದ್ರನಾಯ್ಕ ಎಂಬುವವರ ಮನೆಯ ಹಿಂಭಾಗ ಬೃಹತ್ ಗಾತ್ರದ ಹೆಬ್ಬಾವು ಪ್ರತ್ಯಕ್ಷವಾಗಿದೆ. ತಕ್ಷಣ ಮನೆಯವರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ನ್ಯಾಮತಿ ಉಪವಲಯ ಅರಣ್ಯಾಧಿಕಾರಿ ಶಿವಯೋಗಿ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಹುಲ್ಲಿನ ಬಣವೆಯಲ್ಲಿ ಅಡಗಿದ್ದ ಹೆಬ್ಬಾವನ್ನು ಸುರಕ್ಷಿತವಾಗಿ ಸೆರೆ ಹಿಡಿದಿದ್ದಾರೆ. ನಂತರ ಗಂಗವ್ವನ ಸರ ಮೀಸಲು ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ. ಹೆಬ್ಬಾವು ಸುಮಾರು 9 ಅಡಿ ಉದ್ದ, ಬರೋಬ್ಬರಿ 30 ಕೆ.ಜಿ. ತೂಕ ಹೊಂದಿತ್ತು ಎಂದು ಅರಣ್ಯ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ.

### ಭದ್ರಾ ಜಲಾಶಯದ ಒಳಹರಿವು ಹೆಚ್ಚಳ

» ದಾವಣಗೆರೆ

ಭದ್ರಾ ಜಲಾಶಯ ವ್ಯಾಪ್ತಿಯ ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಮಳೆ ಮುಂದುವರೆದಿದೆ. ಇಂದು ಭದ್ರಾ ಜಲಾಶಯದ ಒಳವು 7653 ಕ್ಯೂಸೆಕ್ ಇದ್ದು, 6449 ಕ್ಯೂಸೆಕ್ ಹೊರ ಹರಿವಿದೆ. ಇಂದಿನ ನೀರಿನ ಮಟ್ಟ 184.1 ಅಡಿ ಇದೆ. ಎಡ ದಂಡೆ ನಾಲೆಗೆ 380 ಕ್ಯೂಸೆಕ್ ಮತ್ತು ಬಲ ದಂಡೆ ನಾಲೆಗೆ 2650 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ. ಈ ಬಾರಿಯ ಮುಂಗಾರು ಹಂಗಾಮಿನಲ್ಲಿ 120 ದಿನ ನೀರು ಹರಿಸಲು ಕಾಡಾ ಸಭೆ ನಿರ್ಧಾರ ಕೈಗೊಳ್ಳಲಾಗಿದೆ. ಭದ್ರಾ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಗೆ ಬರುವ ದಾವಣಗೆರೆ ಜಿಲ್ಲೆಯಲ್ಲಿ 65,847 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತಿದೆ. ಕಳೆದ ವರ್ಷ (2023) ಇದೇ ದಿನ (ಸೆ.13) 431 ಕ್ಯೂಸೆಕ್ ಒಳಹರಿವು ಇತ್ತು. 161'4ಳ ಅಡಿ ಮಾತ್ರ ನೀರು ಸಂಗ್ರಹವಾಗಿತ್ತು. ಭದ್ರಾ ಡ್ಯಾಂ ಭರ್ತಿಯಿಂದ ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಯ ರೈತರಲ್ಲಿ ಸಂತಸ ಮನೆ ಮಾಡಿದೆ. ಜಿಲ್ಲೆಯಲ್ಲಿ ತುಂಗಭದ್ರಾ ನದಿ ಉಕ್ಕಿ ಹರಿಯುತ್ತದೆ. ಜಿಲ್ಲೆಯ ಹೊನ್ನಾಳಿ, ಹರಿಹರ ಭಾಗದಲ್ಲಿ ತುಂಗಭದ್ರಾ ನದಿ ಹಾಯ್ದು ಹೋಗುತ್ತಿದ್ದು, ಈ ಭಾಗದಲ್ಲಿಯೂ ಸಹ ಭತ್ತ ನಾಟಿ ಮುಗಿದಿದೆ. ಭದ್ರಾವತಿ ಗಡಿ ಭಾಗದಲ್ಲಿರುವ ಲಕ್ಕವಳ್ಳಿಯ ಭದ್ರಾ ಜಲಾಶಯದ ಒಟ್ಟು ನೀರಿನ ಸಾಮರ್ಥ್ಯ 71.54 ಟಿಎಂಸಿ ಇದ್ದು, ಗರಿಷ್ಠ 186 ಅಡಿಯಾಗಿದೆ. ಇಂದಿನ (ಸೆ.11) ನೀರಿನ ಮಟ್ಟ 183.11 ಅಡಿಯಷ್ಟಿದೆ. ಒಳ ಹರಿವು ಕ್ಯೂಸೆಕ್ 7653 ನಷ್ಟಿದೆ.

#### ಭದ್ರಾ ಜಲಾಶಯ ನೀರಿನ ವಿವರ

- **ಒಟ್ಟು ನೀರಿನ ಸಾಮರ್ಥ್ಯ 71.54 ಟಿಎಂಸಿ**
- **ಪ್ರಸ್ತುತ ನೀರಿನ ಮಟ್ಟ ; 69.139 ಟಿಎಂಸಿ**
- **ಗರಿಷ್ಠ ಮಟ್ಟ: 186 ಅಡಿ**
- **ಇಂದಿನ ಮಟ್ಟ: 184.1ಅಡಿ**
- **ಒಳ ಹರಿವು : 7653 ಕ್ಯೂಸೆಕ್**
- **ಹೊರ ಹರಿವು : 6449 ಕ್ಯೂಸೆಕ್**
- **ಎಡ ದಂಡೆ : 308 ಕ್ಯೂಸೆಕ್**
- **ಬಲ ದಂಡೆ : 2650 ಕ್ಯೂಸೆಕ್**
- **ಕಳೆದ ವರ್ಷ ಈ ದಿನದ ನೀರಿನ ಮಟ್ಟ: 161'4ಳ ಅಡಿ**
- **ಇದೇ ದಿನ ಕಳೆದ ವರ್ಷದ ಒಳಹರಿವು: 431 ಕ್ಯೂಸೆಕ್**

### ಕರ್ನಾಟಕದ ಮಾನವ ಸರಪಳಿ-25 ಲಕ್ಷರು ಭಾಗಿ

» ಬೆಂಗಳೂರು

'ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ'ಯನ್ನು ಭಾನುವಾರ ರಾಜ್ಯಾದ್ಯಂತ ಯಶಸ್ವಿಯಾಗಿ ಆಚರಿಸಲಾಯಿತು. 2,500 ಕಿ.ಮೀ. ಉದ್ದದ ಮಾನವ ಸರಪಳಿಯಲ್ಲಿಬರೋಬ್ಬರಿ 25 ಲಕ್ಷಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ವಿಶ್ವದಾಖಲೆ ಸೃಷ್ಟಿಸಿದರು. ಸಮಾಜ ಕಲ್ಯಾಣ ಇಲಾಖೆ ನೇತೃತ್ವದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಯತ್‌ರಾಜ್, ಶಿಕ್ಷಣ ಸೇರಿದಂತೆ 8 ಇಲಾಖೆಗಳು ಈ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದವು. ಉಳಿದ 25ಕ್ಕೂ ಹೆಚ್ಚು ಇಲಾಖೆಗಳು ನಾನಾ ರೀತಿಯಲ್ಲಿತಮ್ಮದೇ ಸಹಭಾಗಿತ್ವ ಮೆರೆದು ದಿನಾಚರಣೆ ಯಶಸ್ವಿಗೊಳಿಸಿವೆ. 25 ಲಕ್ಷಕ್ಕೂ ಹೆಚ್ಚು ಮಂದಿ ಹೆಸರು ನೋಂದಾಯಿಸಿ ಮಾನವ ಸರಪಳಿಯಲ್ಲಿ ಭಾಗವಹಿಸಿದ್ದರು. ಕರ್ನಾಟಕದ ಉತ್ತರದ ತುಟ್ಟತುದಿಯ ಜಿಲ್ಲೆಯಾದ ಬೀದರ್‌ನಿಂದ ದಕ್ಷಿಣದ ತುಟ್ಟತುದಿಯ ಜಿಲ್ಲೆಯಾದ ಚಾಮರಾಜನಗರದವರೆಗೆ ಸೆ. 15ರಂದು ಮಾನವ ಸರಪಳಿಯನ್ನು ಆಯೋಜಿಸಲಾಗಿತ್ತು. ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ಜನಜಾಗೃತಿ ಮೂಡಿಸಲು ಮಾನವ ಸರಪಳಿ ರಚಿಸುವಂತೆ ಕರ್ನಾಟಕ ಸರ್ಕಾರ ನೀಡಿದ್ದ ಕರೆಗೆ ಸ್ಪಂದಿಸಿದ ಕರ್ನಾಟಕದ ಲಕ್ಷಾಂತರ ಜನ, 2500 ಕಿಮೀವರೆಗೆ ಮಾನವ ಸರಪಳಿ ನಿರ್ಮಿಸಿದರು.

# ಮನುಷ್ಯನಿಗೆ ನಂಬಿಕೆ ಬಹಳ ಮುಖ್ಯ: ಸ್ವಾಮೀಜಿ

» ಸಾಣೇಹಳ್ಳಿ

ಇಲ್ಲಿನ ಶ್ರೀ ಶಾಮನೂರು ಶಿವಶಂಕರಪ್ಪ ಒಳಾಂಗಣ ರಂಗಮಂದಿರದಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ 'ದಿಟ್ಟ ಹೆಜ್ಜೆಯ ಧೀರ ಪ್ರಭು' (ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳವರನ್ನು ಕುರಿತು) ವಿಷಯ ಕುರಿತ 'ದಂದಣ ದತ್ತಣ' ಗೋಷ್ಠಿಯ ಸಾನ್ನಿಧ್ಯವಹಿಸಿದ್ದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಮಾತನಾಡಿ ಮನುಷ್ಯನಿಗೆ ನಂಬಿಕೆ ಬಹಳ ಮುಖ್ಯ. ನಂಬಿಕೆ ಇಲ್ಲದಿದ್ದರೆ ಏನೂ ಸಾಧಿಸಲಿಕ್ಕೆ ಸಾಧ್ಯವಿಲ್ಲ. ನಮ್ಮ ಗುರುಗಳಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ನಂಬಿಕೆಯ ಸಾಕಾರ ಮೂರ್ತಿಯಾಗಿದ್ದರು. ಶಿಷ್ಯರ ಬಗ್ಗೆ ಅಪಾರ ನಂಬಿಕೆಯನ್ನಿಟ್ಟುಕೊಂಡಿದ್ದರು. ನಂಬಿಕೆಗೆ ದ್ರೋಹ ಬಗೆದರೆ ತಕ್ಷಣ ಕ್ರಮ ತೆಗೆದುಕೊಂಡು ಜಾಗೃತರನ್ನಾಗಿ ಮಾಡುತ್ತಿದ್ದರು. ಯಾರಾದರೂ ತಪ್ಪು ಮಾಡಿದರೆ ಒದ್ದು ಮಠದಿಂದ ಹೊರಗೆ ಹಾಕಬೇಕು ಎನ್ನುವ ಮನಸ್ಥಿತಿ ಅವರಲ್ಲಿರಲಿಲ್ಲ. ಅವರನ್ನು ತಿದ್ದಿ, ತೀಡಿ ಸರಿದಾರಿಗೆತರುವಕಾರ್ಯಮಾಡುತ್ತಿದ್ದರು. ಶ್ರೀಗಳವರದು ತಾಯಿಯ ಹೃದಯ. ಒಬ್ಬ ಯಾರಾದರೂ ತಪ್ಪು ಮಾಡಿದರೆ ಅವರನ್ನು ತಿದ್ದುವ ಹೃದಯ ಶ್ರೀಮಂತಿಕೆ ಅವರಲ್ಲಿತ್ತು. ಒಬ್ಬ ವ್ಯಕ್ತಿಯನ್ನು ಬೆಳೆಸಬೇಕು ಎನ್ನುವ ಭಾವನೆ ಬೆಳೆಸಿಕೊಂಡಿದ್ದರು. ಸಾಮಾನ್ಯ ವ್ಯಕ್ತಿಯಿಂದ ಅಸಮಾನ್ಯ ಕೆಲಸವನ್ನು ಮಾಡಿಸುವ ಚೇತನ ಅವರು. ಯಾರನ್ನೂ ಮೇಲು-ಕೀಳು ಎಂದು ಭಾವಿಸಿಕೊಳ್ಳದೇ ಎಲ್ಲರನ್ನೂ ಸಮಾನವಾಗಿ ಕಂಡು ಪ್ರೀತಿಸುತ್ತಿದ್ದರು. ಇವತ್ತಿಗೂ ಅನೇಕ ಜನರು ಗುರುಗಳ ಕಾರಣದಿಂದ ನಮ್ಮ ಮನೆತನ ಬೆಳೆಯಿತು ಎಂದು ಹೃದಯದಲ್ಲಿಟ್ಟುಕೊಂಡು ಪೂಜೆ ಮಾಡುವವರಿದ್ದಾರೆ. ಯಾವುದೇ ಹಳ್ಳಿಗೆ ಹೋದರೂ ಮುಂಚಿತವಾಗಿ ಸುತ್ತಮುತ್ತಲ ಹಳ್ಳಿಯ ಹತ್ತಾರು ಜನ ಮುಖಂಡರಿಗೆ




ಪತ್ರ ಬರೆಯುತ್ತಿದ್ದರು. ಅವರನ್ನು ಕೂರಿಸಿಕೊಂಡು ಕ್ಷೇಮ ಸಮಾಚಾರ ವಿಚಾರಿಸುತ್ತಿದ್ದರು. ಎಲ್ಲರನ್ನು ನಮ್ಮವರು ಎಂದು ನಂಬುತ್ತಿದ್ದರು. ಆ ನಂಬಿಕೆಯೇ ಸಮಾಜ ಇಷ್ಟು ಎತ್ತರಕ್ಕೆ ಬೆಳೆಯುಲು ಸಾಧ್ಯವಾಯಿತು.

ಸಿರಿಗೆರೆ ಮಠವನ್ನು ದುಗ್ಗಾಣಿ ಮಠ ಎಂದು ಕರೆಯುತ್ತಿದ್ದರು. ಯಾರಾದರೂ ಮುಖಂಡರು ಮಠಕ್ಕೆ ಬಂದರೆ ಮಠದಲ್ಲಿ ಅವರಿಗೆ ಅನ್ನ ಮಾಡಲಿಕ್ಕೆ ಅಕ್ಕಿ ಇರುತ್ತಿರಲಿಲ್ಲ. ಬೇರೆಯವರ ಮನೆಯಲ್ಲಿ ಕಡವಾಗಿ ತೆಗೆದುಕೊಂಡು ಬಂದು ಊಟಕ್ಕೆ ಮಾಡಿಸುತ್ತಿದ್ದರು. ಇಂತಹ ದುಗ್ಗಾಣಿ ಮಠವನ್ನು ದುಡಿಯುವ ಮಠವನ್ನಾಗಿ ಮಾಡಿದವರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು.

ಶ್ರೀಗಳವರಲ್ಲಿ ವೈಚಾರಿಕತೆ ತುಂಬಿ ತುಳುಕುತ್ತಿತ್ತು. ಮೌಢ್ಯ ಅವರಿಂದ ಬಹುದೂರ. ಅಮವಾಸ್ಯೆಯ ದಿನದಂದೇ ಅನೇಕ ಜನರಿಗೆ ಮದುವೆ ಮಾಡಿಸಿದ ನಿದರ್ಶನಗಳಿವೆ. ಆ ಎಲ್ಲ ಕುಟುಂಬಗಳು ಇವತ್ತಿಗೂ ಸುಖ ಸಂಸಾರಗಳಾಗಿ ಸಮಾಜದಲ್ಲಿ ತಲೆ ಎತ್ತಿ ಬಾಳುತ್ತಿದ್ದಾರೆ. ಅಶುಭ ಎನ್ನುವಂಥದ್ದು ಎಲ್ಲಿಯೂ ಇಲ್ಲ ಎಂದು ಮೌಢ್ಯಗಳನ್ನು ಹೊಡೆದು ಹಾಕಿ ವೈಚಾರಿಕತೆಯನ್ನು ಸಮಾಜವನ್ನು ನಿರ್ಮಾಣ ಮಾಡಿದರು. ಸುಣಕಲ್ಲು ಬಿದರಿನಲ್ಲಿ ಶಾಲೆಯ ಕಟ್ಟಡದ ಭೂಮಿ ಪೂಜೆಯನ್ನು ಹರಿಜನರಿಂದ ಮಾಡಿಸಿದ್ದು ಅವರ ವೈಚಾರಿಕತೆಗೆ ಹಿಡಿದ ಕನ್ನಡಿ. ಅವರ ಮನಸ್ಸು ಮೃದು, ಮಾತು ಕಠೋರವಾಗಿದ್ದವು. ಏನಾದರೂ ಕೆಲಸ ಕಾರ್ಯ ಮಾಡಿದರೆ ಹಣ ಇಟ್ಟುಕೊಂಡು ಮಾಡಿದವರಲ್ಲ. ಜನರ ಪ್ರೀತಿ ವಿಶ್ವಾಸವನ್ನಿಟ್ಟುಕೊಂಡು ಕೆಲಸ ಮಾಡಿದರು. 40 ವರ್ಷಗಳ ಅವಧಿಯಲ್ಲಿ ಮಠ ಹಾಗೂ ಸಮಾಜದ ಶಿಷ್ಯರು ಆರ್ಥಿಕವಾಗಿ ಸುಸ್ಥಿತಿಯಲ್ಲಿರುವಂತೆ ಮಾಡಿದರು. ಹೀಗೆ ಒಬ್ಬರನ್ನು ಒಂದೊಂದು ಕೆಲಸದಲ್ಲಿ ತೊಡಗಿಸುವಂಥ ಗುಣ ಅವರಲ್ಲಿ. ನಿರಂತರವಾಗಿಓದುಬರಹಗಾರರಾಗಿದ್ದರು. ಒಂದು ಸಾರಿ ಬರೆದದ್ದನ್ನು ತಿದ್ದುವ, ತೀಡುವ ಪ್ರವೃತ್ತಿ ಇಟ್ಟುಕೊಂಡಿರಲಿಲ್ಲ. ವಚನ ಸಾಹಿತ್ಯ, ಶರಣ ಸಾಹಿತ್ಯ ಎಂದರೆ ಬಹಳ ಒಲವು. ಕಲಾಸಂಘದ ಮೂಲಕ ಶರಣರ ನಾಟಕಗಳನ್ನು ಆಡಿಸುತ್ತಿದ್ದರು. ಎಲ್ಲ ಕೆಲಸಗಳನ್ನು ಪ್ರೀತಿಯಿಂದ ತಾವು ಮಾಡಿ ಇನ್ನೊಬ್ಬರಿಗೆ ಕಲಿಸಿಕೊಡುತ್ತಿದ್ದರು. ಶ್ರೀಗಳವರು ಈಗಲೂ ನೆನೆದವರ ಮನದಲ್ಲಿದ್ದಾರೆ. ಅವರೊಬ್ಬ ಜಗದಗಲ, ಮುಗಿಲಗಲ. ಅವರು ವಿಶ್ವವ್ಯಾಪಿ. ಈ ದಂದಣ ದತ್ತಣ ಗೋಷ್ಠಿಯನ್ನು ಪ್ರಾರಂಭ ಶ್ರೀಗಳವರೇ ಮಾಡಿದ್ದು.ಇತಿಹಾಸವನ್ನು ಪ್ರತಿಯೊಬ್ಬರು ಓದಿ ಅರ್ಥ ಮಾಡಿಕೊಳ್ಳಬೇಕು. ಇತಿಹಾಸವನ್ನು ಮರೆತರೆ ಭವಿಷ್ಯವನ್ನು ಕಟ್ಟಲಾರರು. ಇಂತಹ ಇತಿಹಾಸ ಪುರುಷರನ್ನು ನೆನಪಿಸಿಕೊಳ್ಳುವುದರ ಮೂಲಕ ನಮ್ಮ ವ್ಯಕ್ತಿತ್ವವನ್ನು ಮತ್ತಷ್ಟು ಎತ್ತರಗೊಳಿಸಿಕೊಳ್ಳಬೇಕು ಎಂದರು.ಹೊಸದುರ್ಗದ ನಿವೃತ್ತ ಮುಖ್ಯೋಪಾಧ್ಯಾಯ ಬಿ ಪಿ ಓಂಕಾರಪ್ಪ ಮಾತನಾಡಿ ಶಿವಕುಮಾರ ಶ್ರೀಗಳಿಗೆ ಮಾತ್ರ ದಿಟ್ಟ ಹೆಜ್ಜೆಯ ಧೀರ ಪ್ರಭು ಎಂದು ಕರೆಯಲಿಕ್ಕೆ ಸಾಧ್ಯ. ಈಗಲೂ ಸಮಾಜದ ಭಕ್ತರ ಹೃದಯಲ್ಲಿದ್ದಾರೆ. ಹಳ್ಳಿ ಹಳ್ಳಿಗೆ ಹೋಗಿ ಸಮಾಜವನ್ನು ಕಟ್ಟಿ ಬೆಳೆಸಿದವರು. ಹಳ್ಳಿಗಳ ಪ್ರತಿಯೊಂದು ಮನೆಯ ಸದಸ್ಯರ ಬಗ್ಗೆ ಕಾಳಜಿ ಹೊಂದಿದ್ದರು. ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ಸಹಪಂಕ್ತಿ ಬೋಜನದ ವ್ಯವಸ್ಥೆ ಮಾಡಿದವರು. ಬಸವಣ್ಣನವರ ತತ್ವಗಳನ್ನು ತಲೆ ಮೇಲೆ ಹೊತ್ತುಕೊಂಡು ಶರಣರ ವಿಚಾರಗಳನ್ನು ಜನಮಾನಸದಲ್ಲಿ ಬಿತ್ತಿದರು. ಯಾರನ್ನೂ ಜಾತಿಯಿಂದ ಅಳೆಯದೇ ನೀತಿಯಿಂದ ಅಳೆಯಬೇಕು ಎಂದು ಹೇಳಿ ಸಮಸಮಾಜವನ್ನು ನಿರ್ಮಾಣ ಮಾಡಿದರು. ಎಲ್ಲ ವರ್ಗದ ಜನರನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಜವಾನನಿಂದ ದಿವಾನವರೆಗೂ ಎಲ್ಲರೂ ಸಮಾನರು ಎಂದು ಹೇಳಿ ಅದರಂತೆ ಕಾಣುತ್ತಿದ್ದರು. 40 ವರ್ಷಗಳ ಸುದೀರ್ಘವಾಗಿ ಮಠದ ಜವಾಬ್ದಾರಿಯನ್ನು ನಿರ್ವಹಿಸಿದರು. ಅವರು ಪಟ್ಟಾಧಿಕಾರವಾದಾಗ ಹೂವಿನ ಹಾಸಿಗೆಯಾಗಿರಲಿಲ್ಲ. ಮುಳ್ಳಿನ ಹಾಸಿಗೆಯಾಗಿತ್ತು. ವಿರೋಧವಾಗಿದ್ದ ಕಾಲದಲ್ಲೇ ಯಾವುದಕ್ಕೂ ಹೆದರದೇ ದಿಟ್ಟತನದಿಂದ ಹೋರಾಡಿದರು. ಅವರು ಧೋರಣೆಗಳೇ ತುಂಬಾ ವಿಶಿಷ್ಟವಾಗಿದ್ದವು. ಯಾವುದೇ ಕಾಯಕ ಮಾಡಿದರೂ ಸತ್ಯಶುದ್ಧವಾಗಿರಬೇಕು ಅದು ಸತ್ಯ, ನಿಷ್ಠೆ, ಪ್ರಾಮಾಣಿಕತೆಯಿಂದ ಕೂಡಿರಬೇಕು ಎಂದು ಶ್ರೀಗಳವರು ಹೇಳುತ್ತಿದ್ದರು ಎಂದರು.ಸಿ ಕೆ ಶಿವಮೂರ್ತಿಯವರು ಮಾತನಾಡಿ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕಲಿಸಿಕೊಡುವ ಸಂಸ್ಥೆ ಸಾಣೇಹಳ್ಳಿ ಸಂಸ್ಥೆ. ಈ ಸಂಸ್ಕಾರವನ್ನು ಹುಟ್ಟಿಹಾಕಿದವರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು. ಇಂತಹ ಪುಣ್ಯವನ್ನು ನೀವೆಲ್ಲರೂ ಸದ್ಬಳಕೆ ಮಾಡಿಕೊಳ್ಳಬೇಕು. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳವರು ಅಕ್ಕನ ಬಳಗ, ಅಣ್ಣನ ಬಳಗವನ್ನು ಸ್ಥಾಪಿಸಿ ಶರಣರ ವಿಚಾರಗಳನ್ನು ಪ್ರಚಾರ ಮಾಡಿದರು. ಸಮಾಜದಲ್ಲಿ ಯಾವ ರೀತಿಯ ಬಾಳಬೇಕೆಂದು ಮಾರ್ಗದರ್ಶನ ಮಾಡಿದ ಮಠ ತರಳಬಾಳು ಮಠ ಎಂದರು. ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷ ಡಿ ವಿ ಗಂಗಾಧರಪ್ಪ ಉಪಸ್ಥಿತರಿದ್ದರು.

ತರಳಬಾಳು ಗುರುಪರಂಪರೆಯ ವಿಷಯ ಕುರಿತು ನಯನ ಡಿ, ಲೋಕೇಶ್, ಪ್ರಾರ್ಥನ, ಹೇಮಂತ್, ಅಮೃತ, ಅಕ್ಷಯ ಮಾತನಾಡಿದರು. ಸಂಗೀತ ಶಿಕ್ಷಕ ಹೆಚ್ ಎಸ್ ನಾಗರಾಜ್ ಹಾಗೂ ತಬಲಸಾಥಿ ಶರಣ್ ವಚನಗೀತೆಗಳನ್ನು ಹಾಡಿದರು. ದಿವ್ಯಶ್ರೀ ಸ್ವಾಗತಿಸಿದರು. ಅಭಿಷೇಕ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು ಶಾಲಾ ಮಕ್ಕಳು ವಚನಗೀತೆಗೆ ಆಕರ್ಷಕನೃತ್ಯ ಮಾಡಿದರು. ಕಾರ್ಯಕ್ರಮದಲ್ಲಿ ಶಾಲಾಮಕ್ಕಳು, ಶಿಕ್ಷಕರು, ನೌಕರರು ಭಾಗವಹಿಸಿದ್ದರು.

### ಒಂದು ಕೆ.ಜಿ.ಪೌಡರನ್ನು ಮಾರಾಟ ಮಾಡಿದರೆ 180 ರೂ. ನಷ್ಟ

# ಹಾಲಿನ ಬೇಡಿಕೆ ನೋಡಿಕೊಂಡು ದರ ಏರಿಕೆ

» ಚಿತ್ರದುರ್ಗ

ಮುಂದಿನ ದಿನಗಳಲ್ಲಿ ಮಾರುಕಟ್ಟೆ ವಿಸ್ತರಿಸಿ ಹಾಲು ಹಾಗೂ ಬೆಣ್ಣೆಗೆ ಹೆಚ್ಚಿನ ದರ ನೀಡುವ ಚಿಂತನೆಯಿಂದ ಎಂದು ಶಿವಮೊಗ್ಗ ಹಾಲು ಒಕ್ಕೂಟದ ಅಧ್ಯಕ್ಷ ವಿದ್ಯಾಧರ್ ಭರವಸೆ ನೀಡಿದರು.

ತ.ರಾ.ಸು.ರಂಗಮಂದಿರದಲ್ಲಿ ಸೋಮವಾರ ನಡೆದ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಗಮದಿಂದ ಜಿಲ್ಲೆಯ ಆರು ತಾಲೂಕಿನ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿಗಳಿಗಾಗಿ ನಡೆದ ಪ್ರಾದೇಶಿಕ ಸಭೆ ಉದ್ಘಾಟಿಸಿ ಮಾತನಾಡಿದರು.

ಹಾಲಿನ ಪೌಡರ್ ಹಾಗೂ ಬೆಣ್ಣೆ ಸ್ಟಾಕ್‌ಯಿದ್ದು, ದರ ಕಡಿಮೆಯಾಗಿದೆ. ಒಂದು ಕೆ.ಜಿ. ಹಾಲಿನ ಪೌಡರ್ ಸಿದ್ದಪಡಿಸಲು ಹನ್ನೊಂದು ಲೀ.ಹಾಲು ಬೇಕಾಗುತ್ತದೆ. ಮೂವತ್ತಾರು ರೂ.ಗೆ ಒಂದು ಲೀ.ಹಾಲು ಖರೀಧಿಸುತ್ತಿದ್ದು, 391 ರೂ.ಬೇಕಾಗುತ್ತದೆ. ಒಂದು ಕೆ.ಜಿ.ಪೌಡರನ್ನು ಮಾರಾಟ ಮಾಡಿದರೆ 180 ರೂ. ನಷ್ಟವಾಗುತ್ತಿದೆ. ಹಾಲಿನ ಬೇಡಿಕೆ




ನೋಡಿಕೊಂಡು ದರ ಏರಿಕೆ ಮಾಡಲಾಗುವುದು. ಬೆಣ್ಣೆಯೂ ಸಹ ಸ್ಟಾಕ್ ಇದೆ. ಆದರೆ ರೇಟ್ ಇಲ್ಲ. ಒಟ್ಟಾರೆ ಹಾಲು, ಪೌಡರ್ ಮತ್ತು ಬೆಣ್ಣೆ ದರ ಕುಸಿದಿರುವುದರಿಂದ ಒಕ್ಕೂಟ ನಷ್ಟದಲ್ಲಿರುವುದನ್ನು ಸರಿದೂಗಿಸುವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿದರು. ಶಿವಮೊಗ್ಗ, ದಾವಣಗೆ, ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ನಿರ್ದೇಶಕ ಜಿ.ಬಿ.ಶೇಖರ್ ಮಾತನಾಡಿ ರೈತರಿಗೆ ಅನುಕೂಲವಾಗಬೇಕಾಗಿ ರುವುದರಿಂದ ಜಿಲ್ಲೆಯಲ್ಲಿ ಹೊಸ ಹಾಲಿನ ಸೊಸೈಟಿಗಳು ಆರಂಭವಾಗಬೇಕು. ಜಾನುವಾರ ೧ಗಳಿಗೆ ವಿಮೆ ಮಾಡಿಸಿದರೆ ಆಕಸ್ಮಿಕ ವಾಗಿ ರಾಸುಗಳು ಮೃತಪಟ್ಟಾಗ ಪರಿಹಾರ ದೊರಕುತ್ತದೆ. ರೈತರು ಗುಣಮಟ್ಟದ ಹಾಲನ್ನು ಸಹಕಾರ ಸಂಘಕ್ಕೆ ಕೊಡಬೇಕೆಂದು ಮನವಿ ಮಾಡಿದರು. ರೈತರಿಗೆ ಕಷ್ಟವಾಗಬಾರದನ್ನುವ ಕಾರಣಕ್ಕೆ ಹಾಲಿನ ದರವನ್ನು ಜಾಸ್ತಿ ಮಾಡಬೇಕೆಂದು ಒಕ್ಕೂಟದ ಅಧ್ಯಕ್ಷರಿಗೆ ಸಲಹೆ ನೀಡಿದರು.

ನಿ ದ ರ್ ೕ ಶ ಕ ರ ಗ ಳಾ ದ ರೇವಣಸಿದ್ದಪ್ಪ, ಸಂಜೀವಮೂರ್ತಿ, ರವಿಕುಮಾರ್, ಶೇಖರ್, ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಡಾ.ಮುರಳಿಧರ್, ಉಪ ವ್ಯವಸ್ಥಾಪಕ ಕುಮಾರಸ್ವಾಮಿ ವೇದಿಕೆಯಲ್ಲಿದ್ದರು.

### ರಾಂಪುರದಲ್ಲಿ ಹಿಂದೂಮಹಾಗಣಪತಿ ಶೋಭಾ ಯಾತ್ರೆಯ ಭವ್ಯ ಮೆರವಣಿಗೆ: ಡಿಕೆಆರ್ ಗ್ರೂಪ್ಸ್ ಅಧ್ಯಕ್ಷ ಎಂಡಿ ಮಂಜುನಾಥ್ ಚಾಲನೆ

» ಮೊಳಕಾಲ್ಮುರು

ರಾಂಪುರ ಗ್ರಾಮದಲ್ಲಿ ಹಿಂದೂ ಮಹಾ ಗಣಪತಿ ವಿಸರ್ಜನೆಯ



ನಿಮಿತ್ತವಾಗಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಶೋಭಾಯಾತ್ರೆ ವಿಜೃಂಭಣೆಯಿಂದ ನಡೆಯಿತು. ರಾಂಪುರದ ಕುಬೇರ ನಗರದಲ್ಲಿ ಶ್ರೀ ವಿನಾಯಕ ಮಿತ್ರ ಮಂಡಳಿಯಿಂದ ಆಯೋಜಿಸಲಾಗಿದ್ದ ಹಿಂದೂ ಮಹಾಗಣಪತಿ ಬೃಹತ್ ಶೋಭಾಯಾತ್ರೆಗೆ ಡಿಕೆಆರ್ ಸಂಸ್ಥೆಯ ಅಧ್ಯಕ್ಷರು ಮತ್ತು ಮಾಜಿ ತಾಲೂಕುಪಂಚಾಯಿತಿಅಧ್ಯಕ್ಷರಾದ ಎಂಡಿ ಮಂಜುನಾಥ್ ಚಾಲನೆ ನೀಡಿದರು.ಬೃಹತ್ ಮೆರವಣಿಗೆಯ ಸಂಭ್ರಮದ ಕ್ಷಣಕ್ಕೆ ರಾಂಪುರ, ಕೆಕೆಪುರ ಸೇರಿದಂತೆ ಸುತ್ತಲಿನ ನಾನಾ ಹಳ್ಳಿಗಳಿಂದ ಸಾವಿರಾರು ಭಕ್ತರು ಸಾಕ್ಷಿಯಾದರು. ಈ ಶೋಭಯಾತ್ರೆಗೆ ನಿರೀಕ್ಷೆಗೂ ಮೀರಿ ಸಾವಿರಾರು ಜನರು ಸಾಗರೋಪಾದಿಯಲ್ಲಿ ಕಿಕ್ಕಿರಿದು ಮೆರವಣಿಗೆಯಲ್ಲಿ ಸೇರಿದ್ದರು.ಬೃಹತ್ ಶೋಭಾಯಾತ್ರೆಗೆ ಗ್ರಾಮವು ಕೇಸರಿಮಯವಾಗಿತ್ತು. ಭವ್ಯ ಮೆರವಣಿಗೆಯಲ್ಲಿ ವೀರಗಾಸೆ,ಗೊಂಬೆ ಕುಣಿತ ಹಾಗೂ ಚಂಡಿಮೇಳಗಳ ವಿಶೇಷ ಕಲಾತಂಡಗಳಿಂದ ಭವ್ಯ ಮೆರವಣಿಗೆಯು ಇನ್ನಷ್ಟು ಕಳೆಗಟ್ಟಿತು. ಮಕ್ಕಳು ಯುವಕರು ಸೇರಿದಂತೆ ಎಲ್ಲಾ ವಯೋಮಾನದವರು ಡಿಜೆ ಸದ್ದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಮೆರವಣಿಗೆಯುದ್ದಕ್ಕೂ ಪೊಲೀಸರು ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಭದ್ರತೆ ಒದಗಿಸಿದ್ದರು. ಕಾರ್ಯಕ್ರಮದಲ್ಲಿ ಮಂಡಳಿಯ ಅಧ್ಯಕ್ಷರಾದ ಶಾಮಿಲ್ ರಮೇಶ್, ಮೋಹನ್, ಮಂಜುನಾಥ, ಕುಮಾರ್ ಮಲ್ಲಿಕಾರ್ಜುನ್,ಅನಿಲ್ ಕುಮಾರ್ ಇದ್ದರು


## ಪ್ರಮುಖ ಸುದ್ದಿ

### ಹೊಸದುರ್ಗದ ತಾಲೂಕು ಆಸ್ಪತ್ರೆಯಲ್ಲಿ ಕೀಲು ಮೂಳೆ ತಜ್ಞರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಯು. ಎಸ್.ಸಂಜಯ್

# ಕನ್ನಡದಲ್ಲೆ ಚೀಟಿ ಬರೆದು ಕೊಡುತ್ತಿದ್ದೇನೆ ನೀ ಹೋಗಿ ಮಾತ್ರೆ ತಗೋ......

» ನಾಗತಿಹಳ್ಳಿಮಂಜುನಾಥ್

ಹೊಸದುರ್ಗ : ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ ಸತ್ತಂತಹರನು ಬಡಿದೆಚ್ಚರಿಸು ಕಚ್ಚಾಡುವವರನು ಕೂಡಿಸಿ ಓಲಿಸು......... ರಾಷ್ಟ್ರ ಕವಿ ಕುವೆಂಪು ಅವರ ರಚನೆಯ ಈ ಕವಿತೆಯ ಸಾಲುಗಳು ಎಷ್ಟೊಂದು ಅರ್ಥಗರ್ಭಿತವಾಗಿವೆ ಅಲ್ಲವೇ.. ಕನ್ನಡ ಎಂದರೆ ಎಲ್ಲರಿಗೂ ಪ್ರೀತಿ ಅಭಿಮಾನ ಅಷ್ಟೇ ಗೌರವ ಕನ್ನಡವನ್ನ ಉಳಿಸಿ ಬೆಳೆಸಬೇಕು ಎಂಬುದು ಪ್ರತಿಯೋಬ್ಬರ ಮನದಾಳದ ಮಾತು ಅಷೇ ಎಕೆ ಕನ್ನಡವನ್ನ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರ್ಕಾರವೂ ಕೂಡ ಸಾಕಷ್ಟು ಚಿಂತನೆಗಳನ್ನ ಮಾಡುತ್ತಾ ಹಲವಾರು ಕನ್ನಡ ತನವನ್ನ ಉಳಿಸುವ ನಿಟ್ಟಿನಲ್ಲಿ ಸರ್ಕಾರದ ವ್ಯಾಪ್ತಿಯಲ್ಲಿ ಅನೇಕ ಕಾನೂನುಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದ್ದೆ ಅಂತಹುದರಲ್ಲಿ ಕಳೆದ ಕೆಲವು ದಿನಗಳ ಹಿಂದೆಯಷ್ಟೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ವೈದ್ಯರು ಔಷಧಿ ಚೀಟಿಯನ್ನು ಕನ್ನಡದಲ್ಲಿ ಬರೆಯುವಂತೆ






ವೈದ್ಯರು ಕನ್ನಡದಲ್ಲಿ ಮಾತ್ರೆ ಚೀಟಿಯನ್ನು ಬರೆಯುವ. ವಿಚಾರ ಸರ್ಕಾರದ ಹಂತದಲ್ಲಿ ಚರ್ಚೆಯಾದ ಅಂಶವನ್ನು ಗಮನಿಸಿ ನಾನು ಕನ್ನಡದಲ್ಲಿ ರೋಗಿಗಳಿಗೆ ಅರ್ಥವಾಗುವಂತೆ ಔಷಧಿ ಹಾಗೂ ಚಿಕಿತ್ಸೆಯ ಮಾಹಿತಿಯನ್ನು ದಾಖಲಿಸಲು ನಿರ್ಧರಿಸಿದೆ. ಸೆ.12 ರ ಗುರುವಾರದಿಂದ ಕನ್ನಡದಲ್ಲಿ ಮಾತ್ರೆ, ಔಷಧಿ ಹೆಸರು ಹಾಗೂ ಬಳಸುವ ವಿಧಾನವನ್ನು, ರೋಗಿಗೆ ನೀಡುವ ಸಲಹೆಗಳನ್ನು ಕನ್ನಡದಲ್ಲಿಯೇ ದಾಖಲಿಸಲು ಆರಂಭಿಸಿದ್ದೇನೆ. ಕನ್ನಡದ ನೆಲದಲ್ಲಿ ಹುಟ್ಟಿರುವ ನನಗೆ ಕನ್ನಡದಲ್ಲಿ ಬರೆಯಲು ಯಾವುದೇ ತೊಂದರೆಯಾಗುವುದಿಲ್ಲ. ಚಿಕಿತ್ಸೆ ನೀಡುವಾಗ ರೋಗಿಗಳೊಂದಿಗೆ ಕನ್ನಡದಲ್ಲಿಯೇ ಸಂಭಾಷಿಸುತ್ತೇವೆ. ಹಾಗೆಯೇ ಮಾಹಿತಿಯನ್ನು ಕೂಡ ಕನ್ನಡದಲ್ಲಿ ದಾಖಲಿಸಲಾಗುತ್ತಿದೆ.

» **ಡಾ.ಯು.ಎಸ್.ಸಂಜಯ್, ಕಿಲು ಮೂಳೆ ತಜ್ಞರು, ಸರ್ಕಾರಿ ತಾಲೂಕು ಆಸ್ಪತೆ**


ಸೂಚನೆ ನೀಡಲು ಸರ್ಕಾರಕ್ಕೆ ಬರೆದಿರುವ ಪತ್ರಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುವ ಮೊದಲೇ ಚಿತ್ರದುರ್ಗ ಜಿಲ್ಲೆಯ ತಾಲೂಕು ಕೇಂದ್ರವಾದ ಹೊಸದುರ್ಗದ ಸರ್ಕಾರಿ ವೈದ್ಯರೊಬ್ಬರು ಕನ್ನಡದಲ್ಲಿಯೇ ಔಷಧಿ ಚೀಟಿ ಬರೆಯುವ ಮೂಲಕ ಕನ್ನಡ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಹೊಸದುರ್ಗದ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಕೀಲು ಮೂಳೆ ತಜ್ಞರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಯು. ಎಸ್. ಸಂಜಯ್ ಸೆ. 12 ರ ಗುರುವಾರದಿಂದ ಕರ್ತವ್ಯಕ್ಕೆ ಹಾಜರಾಗಿ ಪರೀಕ್ಷಿಸಿದ ರೋಗಿಗಳಿಗೆ ಕನ್ನಡದಲ್ಲಿಯೇ ಔಷಧಿ ಚೀಟಿ , ರೋಗ ಲಕ್ಷಣಗಳು ಹಾಗೂ ಪರಿಹಾರೋಪಾಯಗಳನ್ನು ಕನ್ನಡದಲ್ಲಿ ಬರೆಯುವ ಜೊತೆಗೆ ರೋಗಿಯ ದಾಖಲೆಗಳನ್ನು ಕೂಡ ಕನ್ನಡದಲ್ಲಿಯೇ ದಾಖಲಿಸುವ ಮೂಲಕ ಕನ್ನಡತನ ಮೆರೆದಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾಕ್ಟರ್ ಪುರುಷೋತ್ತಮ ಬಿಳಿಮಲೆ ಅವರು ಇತ್ತೀಚೆಗೆ ಆರೋಗ್ಯ ಇಲಾಖೆಯ ಮಂತ್ರಿ ದಿನೇಶ್ ಗುಂಡೂರಾವ್ ಅವರಿಗೆ ಪ್ರಾಧಿಕಾರದ ವತಿಯಿಂದ ಪತ್ರ ಬರೆಯುವ ಮೂಲಕ ವೈದ್ಯರು ಕನ್ನಡದಲ್ಲಿ ಔಷಧಿ ಚೀಟಿ ಬರೆಯುವುದನ್ನು ಉತ್ತೇಜಿಸಬೇಕು. ಇಂತಹ ವೈದ್ಯರನ್ನ ಗುರುತಿಸಿ ಅಭಿನಂದಿಸುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಒತ್ತಾಯಿಸಿದರು.

ಆರೋಗ್ಯ ಇಲಾಖೆಯು ಈ ಕುರಿತು ಪರಿಶೀಲನೆ ನಡೆಸಿ ಮುಂದಿನ ಕ್ರಮ ವಹಿಸುವುದಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸಿತ್ತು . ಆದರೆ ಸರ್ಕಾರದ ಆದೇಶ ಹೊರಬೀಳುವ ಮುನ್ನವೇ ವೈದ್ಯರು ರೋಗಿಗಳಿಗೆ ಅರ್ಥವಾಗುವಂತೆ ಕನ್ನಡದಲ್ಲಿಯೇ ಮಾತ್ರೆಯ ಹೆಸರು, ಔಷಧಿ ಬಳಸುವ ವಿವರ, ರೋಗದ ಕಾರಣಗಳು, ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕುರಿತು ಮಾಹಿತಿಯನ್ನ ಕನ್ನಡದಲ್ಲಿ ದಾಖಲಿಸಲು ಮುಂದಾಗಿರುವುದು ಕನ್ನಡ ಅಭಿಮಾನಿಗಳಿಗೆ ಸಂತಸ ತಂದಿದೆ.

ಕೀಲು ಮೂಳೆ ತಜ್ಞ ಡಾ. ಸಂಜಯ್ ಕನ್ನಡದಲ್ಲಿ ಬರೆದ ಔಷಧಿ ಚೀಟಿಗಳನ್ನು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡುವ ಮೂಲಕ ಸಂತಸ ವ್ಯಕ್ತಪಡಿಸಿದ್ದಾರೆ. ವೈದ್ಯರ ಕನ್ನಡ ಅಭಿಮಾನಕ್ಕೆ ಸಾಮಾಜಿಕ ಜಾಲತಾಣದಲ್ಲಿ ಅಭಿನಂದನೆ ವ್ಯಕ್ತವಾಗಿದೆ.



# ಬುದ್ಧ ಮೊಗೆದಷ್ಟೂ ಖಾಲಿಯಾಗದ ಕಡಲು

ಬುದ್ಧ. ಮೊಗೆದಷ್ಟೂ ಖಾಲಿಯಾಗದ ಕಡಲು. ಜಗದ ಮಾನಸವನ್ನು ಮತ್ತೆ ಮತ್ತೆ ಕಾಡುವ, ಅದು ಕೆಸರೆ ಕತ್ತಲಲ್ಲಿ ಮುಳುಗಿದಾಗಲೆಲ್ಲ ಬೆಳದಿಂಗಳ ಕೋಲಾಗಿ ಕೈ ಹಿಡಿದೆತ್ತುವ ಚೈತನ್ಯ . ಐನ್ ಸ್ಟೈನ್ ನಂಥ ವಿಜ್ಞಾನಿ ಬುದ್ಧತತ್ವ ಮನುಷ್ಯ ಲೋಕಕ್ಕೆ ಬೆಳಗು ಎಂದ. ಜಗತ್ತಿನ ಧರ್ಮಗಳಲ್ಲೆ ಹೆಚ್ಚು ತಾರ್ಕಿಕವಾದ, ವಿಜ್ಞಾನದ ತಳಹದಿ ಗಟ್ಟಿಯಾಗಿರುವ, ಭಿನ್ನತೆಗಳನ್ನು ಗೌರವಿಸುವ, ಇರುವುದರಲ್ಲಿ ಹಂಚಿ ತಿನ್ನಲು ಹೇಳುವ, ಅನ್ಯರ ಕುರಿತು ಅಸಹ್ಯ ಪಡದ, ಒಳಗೊಳ್ಳುವಿಕೆಯನ್ನು ಪ್ರತಿಪಾದಿಸುವ, ಪ್ರೇಮವೇ ಆತ್ಯಂತಿಕ ಎಂದು ನಂಬುವ, ಕಲಿತಿದ್ದನ್ನು ಅನ್ವಯ ಮಾಡಿ ತಾಳೆ ನೋಡುವ, ಚಲನೆಯಲ್ಲಿ ನಂಬಿಕೆ ಇಟ್ಟ ತಾರ್ಕಿಕ ತತ್ವ ಬುದ್ಧನದು.

ಹಾಗಿದ್ದರೆ ಅದು ಯಾಕಿಷ್ಟೊಂದು ಅಪಾರ್ಥಗಳಿಗೆ ಒಳಗಾಗಿದೆ ? ಶಿಲೆಯಾದ ಧರ್ಮವಾಗಿ ಇತರ ಧರ್ಮಗಳಂತೆಯೆ ಯಾಕೆ ನಂಜು ಕಾರುತ್ತಿದೆ? ಓಶೋ ಒಂದು ಕಡೆ ಹೇಳುತ್ತಾರೆ, "ಬುದ್ಧನೆಷ್ಟು ಅಪಾರ್ಥಕ್ಕೊಳಗಾದ ವ್ಯಕ್ತಿ ಯಾರೂ ಇಲ್ಲ. ಆತ ಅಪಾರ್ಥಕ್ಕೆ ಒಳಗಾಗದೆ ಇರಲು ಸಾಧ್ಯವೂ ಇಲ್ಲ. ಯಾರು ಪ್ರಜ್ಞೆಗೆ ಅತೀತವಾದುದನ್ನು ಪ್ರಜ್ಞೆಗೆ ಲಿಂಕ್ ಮಾಡಿಕೊಂಡು ಅರಿವನ್ನು ದಾಟಿಸಬಲ್ಲರೊ ಅವರಿಗಷ್ಟೆ ಬುದ್ಧ ಅರ್ಥವಾಗಲು ಸಾಧ್ಯ. ಆತ ಸ್ಪಷ್ಟವಾಗಿ ಹೇಳಿದ್ದಾನೆ,ನಾನು ದೇವರು,ರಾಜ, ಮರ,ನದಿ, ಅಲ್ಲ. ನಾನೊಂದು ಎಚ್ಚರ ಎಂದು ". ವಾಸ್ತವದ ಕತ್ತಲಿಗೆ ಎಚ್ಚರ ಎನ್ನುವುದೊಂದು ದೊಡ್ಡ ಬಿಡುಗಡೆ. ಎಲ್ಲ ಧರ್ಮಗಳೂ ಕತ್ತಲ ಸುಖ ಬಯಸುತ್ತವೆ. ಅವಕ್ಕೆ ಅಂಧಕಾರದ ಸಂಭ್ರಮ ಬೇಕು. ಆದರೆ ಎಚ್ಚರ ಮತ್ತು ಪ್ರಜ್ಞೆಗಳು ನೀನು ಶಾಶ್ವತವಲ್ಲ ಎನ್ನುತ್ತವೆ; ಜನ್ಮ, ಕರ್ಮಗಳನ್ನು ಸಂದೇಹಿಸುತ್ತವೆ. ಸ್ವರ್ಗ, ನರಕಗಳನ್ನು ನಿರಾಕರಿಸುತ್ತವೆ. ರಾಜರಿಗೆ,ಪುರೋಹಿತರಿಗೆ,ಕುಲೀನರಿಗೆ ಇದು ಬೇಡ. ದ್ವೇಷ, ಒಡಕುಗಳಿದ್ದರೆ ಆಳುವವರಿಗೆ ಸಲೀಸು. ಬರ್ಮಾ,ಶ್ರೀ ಲಂಕಾದಲ್ಲಿ ಬುದ್ಧ ಸತ್ತು ನಾರುತ್ತಿದ್ದಾನೆ. ನಮ್ಮಲ್ಲೂ,ಬೇರೆಲ್ಲ ಕಡೆಯೂ ವಾಸನೆ ತಪ್ಪಿಸಿಕೊಳ್ಳಲು ಊದು ಬತ್ತಿ ಹಚ್ಚಿ,ಧೂಪ ಹಾಕಿ ಸುವಾಸನೆ ಎಬ್ಬಿಸುತ್ತಿದ್ದೇವೆ.


ದುಡಿಯುವವರು, ದಲಿತರು ಬುದ್ಧನನ್ನು ಬಿಡುಗಡೆಯ ಬೆಳಕು ಎಂದು ನಂಬಿದ್ದಾರೆ. ದುಡಿಮೆಯ ಧ್ಯಾನ ಬುದ್ಧನನ್ನು ಹತ್ತಿರವಾಗಿಸಿದೆ ಅವರಿಗೆ. ನಾವು ಧ್ಯಾನವನ್ನು ನಿರಾಕರಿಸುತ್ತಿದ್ದೇವೆ. ಐಷಾರಾಮಿ ಧ್ಯಾನವನ್ನು ಆರಾಧಿಸುತ್ತಿದ್ದೇವೆ. ಧ್ಯಾನದ ತುರೀಯ ಸ್ಥಿತಿ ಎಚ್ಚರ ಮತ್ತು ಕಣ್ಣು ಕೋರೈಸುವ ಬೆಳಕು. ನಾವು ಮಕ್ಕಳನ್ನೂ ಅಂಧ ಕಾರಕ್ಕೆ ಅದುಮುತ್ತಿದ್ದೇವೆ. ಬುದ್ಧತ್ವ ಎಂದರೆ ವಿಗ್ರಹ. ಇಂದು ಶಬ್ಧ.

ಇಷ್ಟಾದರೂ ಬುದ್ಧ ಅಮೂರ್ತನಲ್ಲ. ಕೈಚಾಚಿದರೆ ಹಿಡಿದೆತ್ತುವಷ್ಟು ಹತ್ತಿರದಲ್ಲಿದೆ ಅವನ ಕೈ. ಆಳದಲ್ಲಿ ಸಮಾಜವಾದಿಯಾಗಿದ್ದ ಬಾಬಾ ಸಾಹೇಬರು ಬುದ್ಧನೆಂಬ ಆದಿಮ ಸಮಾಜವಾದಿಯ ಕೈ ಹಿಡಿದು ಎದ್ದು ಬಂದರು. ಸಂಕೋಲೆಗಳಲ್ಲಿದ್ದ ಬುದ್ಧನನ್ನೂ ಬಯಲಿಗೆ ತಂದರು. ಬುದ್ಧತ್ವವನ್ನು ಬಂಗಾರದ ಕೋಳ ಎಂದವರಿಗೆ ಬೆಳಕು ಬೆಂಕಿ ಮಾತ್ರವಾಗಿ ಕಾಣುತ್ತದೆ.

ಬುದ್ಧ ,ಮಾರ್ಕ್ಸ್,ಗಾಂಧಿ ಕುರಿತ ಅದ್ಭುತ ತೌಲನಿಕ ವಿಶ್ಲೇಷಣೆಯ ಮೂಲಕ ಬಾಬಾ ಸಾಹೇಬರು, ಬುದ್ಧನ ಸಮಾಜವಾದ ಮತ್ತು ಮಾರ್ಕ್ಸ್ ನ ಸಮತಾವಾದದ ನಡುವೆ ಶೇ 80 ತಾಳೆಯಿದೆ, ಆದರೆ ಆಚರಣೆಯ ದಾರಿ ಮತ್ತು ಆಸೆಯ ತತ್ವಗಳ ದೃಷ್ಟಿಯಿಂದ ಬುದ್ಧ ತತ್ವದಲ್ಲಿ ಹೆಚ್ಚು ಪ್ರೇಮವಿದೆ ಎಂದು ಭಾವಿಸಿದರು.

ಬುದ್ಧ ದೇವರ ಅವತಾರವಲ್ಲ. ರಾಜಕೀಯ ಬಿಕ್ಕಟ್ಟಿನ ಶಿಶು ಎಂದು ತೋರಿಸಿದರು. ಸುಮಾರು ಎರಡು ಸಾವಿರ ವರ್ಷಗಳ ನಂತರ ಅಶ್ವಘೋಷ ಹೊದಿಸಿದ್ದ ಪೀತಾಂಬರದ ಪೊರೆಯನ್ನು ಹರಿದು ತೆಗೆದರು.

ಯಾಕೆ ಬುದ್ಧ ಇಷ್ಟೊಂದು ಕಾಡುತ್ತಿದ್ದಾನೆ ನಮ್ಮನ್ನು. ಬರಿ ನಮ್ಮನ್ನಷ್ಟೆ ಅಲ್ಲ ಶಂಕರನನ್ನೂ, ಶಂಕರನ ಪೂರ್ವ ಸೂರಿಗಳನ್ನೂ, ಕೊನೆಗೆ ಭೈರಪ್ಪನವರನ್ನೂ? ಅದೂ ಮಹಾವೀರ ಕಾಡದೆ ಇರುವಷ್ಟು? ಮಹಾವೀರನ ವಾರಸುದಾರರಿಗೆ, ತತ್ವಗಳಿಗೆ ದೇಶ ಬಿಟ್ಟು ಹೋಗುವ ಪರಿಸ್ಥಿತಿ ಬರಲೇ ಇಲ್ಲ. ಬುದ್ಧ ತತ್ವ ಮಾತ್ರ ರಕ್ತ ಸುರಿಸುತ್ತಲೇ ಇದೆ. ಹೊರಗೆ ಹೋದ ಕಾರಣದಿಂದ ಜಗದ ಬುದ್ಧತ್ವ ಜಗದ ಮಾರ್ಗವಾಗಿದೆ. ಪಾಪ ಜಿನ ತತ್ವಕ್ಕೆ ಈ ಅದೃಷ್ಟ ಸಿಗಲಿಲ್ಲ. ಇರಲಿ ದೇಶದಿಂದ ಹೊರ ಹಾಕಿದ್ದ ಬುದ್ಧನ ಅರಿವನ್ನು ಕಲ್ಲುಗುಂಡು ಮಾಡಿ ಅಶ್ವಘೋಷ ಹೊತ್ತು ತಂದ. ಬುದ್ಧ ಎಲ್ಲರಂತಾದ. ಆದರೆ ಅರಿವೆಂಬ ಬೆಳಕಿನ ಅಲೆಯನ್ನು ಹಿಡಿದು ಶಿಲೆ ಮಾಡಲು ಯಾರಿಂದಲೂ ಸಾಧ್ಯವಾಗಲಿಲ್ಲ.



ಆ ಸಿಟ್ಟಿಗೆ ಶಿಲೆಗೆ ಬಾಂಬು ಇಟ್ಟು ಒಡೆದು ಹಾಕಿ ಬುದ್ಧನನ್ನು ಸೋಲಿಸಿದೆವು ಎಂದು ಸಂಭ್ರಮಿಸಿದೆವು. ಆಗಲೂ ಬುದ್ಧನ ಕಣ್ಣಲ್ಲಿ ನೀರು ಬಂದಿದ್ದು ಕಾಣೆ. ಬುದ್ಧ ಪ್ರೀತಿಯಿಂದ ಕಾಡುತ್ತಿದ್ದಾನೆ ಪ್ರೀತಿಸುವವರಿಗೆ. ದ್ವೇಷಿಸುವವರಿಗೂ ಅವನ ಪ್ರೀತಿ ಕಾಡುತ್ತಲೇ ಇದೆ. ಎಷ್ಟೊಂದು ಶಂಕರರು ಬಂದರು,ಬುದ್ಧ ಸೋಲಲಿಲ್ಲ. ಯಾಕೆಂದರೆ ಅವನು ಸ್ಥಾವರವಲ್ಲ.

ನಮ್ಮ ಹೊಸ ತಲೆಮಾರು ಜ್ಞಾನದ ಹಂಬಲಕ್ಕೆ ಬೀಳಬೇಕು. ಅದು ಹೇಗಿರಬೇಕೆಂದು ಧರ್ಮನಂದ ಕೋಸಾಂಬಿಯವರನ್ನು(ಡಿ.ಡಿ ಕೋಸಾಂಬಿಯವರ ತಂದೆ) ನೋಡಿ ಕಲಿಯಬೇಕು. ಗೌಡ ಸಾರಸ್ವತ ಕೊಂಕಣಿ ಕುಟುಂಬದಲ್ಲಿ ಹುಟ್ಟಿ ಇವರು ಬರಿಗೈಯಲ್ಲಿ ಭರತ ಖಂಡವನ್ನೆಲ್ಲ ಬುದ್ಧನನ್ನು ಹುಡುಕಿ ಓಡಾಡುತ್ತಾರೆ. ಅನೇಕ ಸಾರಿ ಯಮನ ಕೈ ಕುಲುಕುತ್ತಾರೆ. ಆದರೂ ಬೆಳಕಿನ ಹಂಬಲ ನಿಲ್ಲುವುದಿಲ್ಲ. (ನಾನು ಅವರಂತೆ ಮನೆ ಮಾರು ,ಮಕ್ಕಳು,ಮಡದಿ ಬಿಟ್ಟು ಹೊರಡಬೇಕು ಅನ್ನುತ್ತಿಲ್ಲ. ಅರಿವಿನ ಹುಡುಕಾಟ ಅಷ್ಟೊಂದು ತ್ಯಾಗವನ್ನೇನೂ ಕೇಳುವುದಿಲ್ಲ ಈಗ).

ಕೋಸಾಂಬಿಯವರಿಗೆ ಇಂಥ ಹುಚ್ಚು ಹತ್ತಿದ್ದರೂ ಅವರ ಕೈಯಲ್ಲಿದ್ದುದು ಅಶ್ವಘೋಷ ಹಾಕಿಕೊಟ್ಟ ನಕಾಶೆಯೇ. ಅದಕ್ಕೆ ಅವರು ಭಗವಾನ್ ಬುದ್ಧ ಎನ್ನುತ್ತಾರೆ. ಆದರೆ ಅವರ ಹುಡುಕಾಟದ ತೀವ್ರತೆಗೆ ಅಶ್ವಘೋಷನ ನಕ್ಷೆ ಅನೇಕ ಸಾರಿ ಛಿದ್ರವಾಗುತ್ತದೆ. ಅಂಥ ಕಡೆ ಆರ್ಯ-ದಸ್ಯು ಕದನ,ಗಣರಾಜ್ಯಗಳ ನಾಶ, ವೈದಿಕ ಸಂಸ್ಕೃತಿಯ ವಿನಾಶಕರ ನಿಲುವುಗಳ ಬಗ್ಗೆ ಬರೆಯುತ್ತಾರೆ( ಜ್ಞಾನ ದಾಹವಿರುವ ನಮ್ಮ ಹುಡುಗರೆಲ್ಲರೂ ಶ್ರೀರಂಗರು ಅನುವಾದ ಮಾಡಿರುವ ಧರ್ಮಾನಂದ ಕೋಸಂಬೀ ಯವರ ಭಗವಾನ್ ಬುದ್ಧ (1956) ಪುಸ್ತಕ ಓದಲೇಬೇಕು).

ಅಂಬೇಡ್ಕರಿಗೆ ಈ ಸಮಸ್ಯೆಯಾಗಲಿಲ್ಲ. ಅವರ ಕೈಯಲ್ಲಿ ಪಶ್ಚಿಮದ ಪ್ರಕಾಶಮಾನವಾದ ದೀಪ ಇತ್ತು. ಹೆಚ್ಚು ನಿಖರವಾದ ನಕ್ಷೆಯೂ ಇತ್ತು. ಹಾಗಾಗಿ ಅವರಿಗೆ ರಾರಾಜಿಸುವ ಕಸವರದ ಗಣಿಯೇ ಸಿಕ್ಕಿತು. ಬುದ್ಧ ಮೈಕೊಡವಿ ಬಾಬಾಸಾಹೇಬರ ಬಳಿಗೆ ಬಂದ, ಬಚಾವಾದ. ಅಣುಬಾಂಬಿನ ಕತ್ತಲಲ್ಲಿದ್ದ ಐನ್ ಸ್ಟೈನ್ ಬಳಿಗೂ ನಡೆದು ಹೋದ. ಅವನ ಮುಖದಲ್ಲಿ ಭರವಸೆ ಹುಟ್ಟಿಸಿದ. ದ್ವೇಷದ ಗರಗಸ ನಮ್ಮ ಸುತ್ತ ಹಲ್ಲು ಮಸೆಯುತ್ತಿರುವಾಗ ದೇವನೂರರಿಗೆ ಬುದ್ಧ ಪ್ರೀತಿ –ಸಮತೆಯ ವಜ್ರವಾಗಿ ಕಾಣಿಸಿಕೊಂಡ.

ನನಗೆ ಅನ್ನಿಸುತ್ತಿದೆ. ಬುದ್ಧ, ದೊಡ್ಡ ಸಾಮ್ರಾಜ್ಯಗಳು ಹುಟ್ಟುವಾಗ ಬುಡಕಟ್ಟುಗಳು ಕಿತ್ತಾಡಬಾರದು ಎಂದ. ಗಣತತ್ವಕ್ಕಿಂತ ಚೆಂದದ ವ್ಯವಸ್ಥೆ ಬೇರೆ ಇಲ್ಲ ಎಂದು ಹೇಳಿದ. ಕೊನೆಗೆ ಬಿಂಬಸಾರನಂತಹ ರಾಜರಿಗೆ ಆಸೆ ದುಃಖಕ್ಕೆ ಮೂಲ ಎಂದು ತೋರಿಸಲೆತ್ನಿಸಿದ. ದೊಡ್ಡ ರಾಜರುಗಳು ಬುದ್ಧನ ಕರುಣೆಗೆ,ಸಮದರ್ಶಿತ್ವಕ್ಕೆ,ಪ್ರೀತಿಗೆ ತಲೆಬಾಗಿದರು. ಅದಾದ ಎಷ್ಟೋ ವರ್ಷಗಳ ನಂತರ ಅಶೋಕ, ಬುದ್ಧ ಹಚ್ಚಿದ ಸೊಡರನ್ನು ಹಿಡಿದು ಓಡಾಡಿದ. ಯುದ್ಧೋನ್ಮಾದಿ ರಾಷ್ಟ್ರವಾದಿಗಳು ,ಅಶೋಕ ಖಡ್ಗ ಕೆಳಗೆ ಇಳಿಸಿದ್ದನ್ನು ನಖ ಶಿಖಾಂತ ವಿರೋಧಿಸುತ್ತಾರೆ. ಕ್ಷಾತ್ರ ತ್ಯಾಗ ದುಬಾರಿಯಾಯಿತು ಎನ್ನುತ್ತಾರೆ. ಆದರೆ ಅವರೂ ಸಹ ವಿಶ್ವಶಾಂತಿಯ ಬಗ್ಗೆ ಮಾತನಾಡುತ್ತಾರೆ. ಮರದ ನೆರಳು ಮತ್ತು ಎದೆಯ ಪ್ರೀತಿಗಳು ಜಗತ್ತನ್ನು ಬಹುಕಾಲ ಉಳಿಸಬಲ್ಲವು ಎಂದು ಅಶೋಕ ಅರಿತುಕೊಂಡಿದ್ದ. ಇದು ಬುದ್ಧ ಪ್ರಜ್ಞೆ ದಾಟಿಸಿದ್ದ ಅರಿವು. ಈ ಅರಿವು ಸಾವಿರಾರು ಎದೆಗಳ ಆಕ್ರಂದನದ ಮೂಲಕ ಹುಟ್ಟಿತ್ತು. ನಾವು ಇಂದು ಧ್ಯಾನಿಸುತ್ತಿರುವುದು ಇದನ್ನೆ ಅಲ್ಲವೆ? ಆದರೆ ಇಂದಿನ ದೊರೆಗಳಿಗೇಕೆ ಆಕ್ರಂದನಗಳು ಕೇಳುತ್ತಿಲ್ಲ? ಶಿಲೆಯ ಬುದ್ಧನನ್ನು ಹೊತ್ತು ನಡೆವವರಿಗೆ ವಿಷದ ಹೊಳೆಯೂ ಅಮೃತ ಸಮಾನವೆ.

ರಾಜ ಪ್ರಭುತ್ವಗಳು ಉತ್ತುಂಗಕ್ಕೇರಿದರೂ ರಾಜಗೃಹ ಮುಂತಾದ ಕಡೆ ಹೆಚ್ಚು ಹೈರಾರ್ಕಿಗಳಿರಲಿಲ್ಲ ಎಂದು Karen Armstrong ಬರೆಯುತ್ತಾಳೆ.ಪೌರಾತ್ಯ ದೇಶಗಳ ಬಹುಪಾಲು ಧರ್ಮಗಳ ಬಗ್ಗೆ ತೀವ್ರವಾಗಿ ಹುಡುಕಾಡಿರುವ ಈಕೆ ಃಣಜಜ್ಝುಚಿ ಎಂಬ ಹೊತ್ತಿಗೆಯನ್ನು ಹೊತ್ತಿಸಿದ್ದಾಳೆ. ಪರಂಪರೆಯನ್ನು ಹೀಗೂ ಓದಲು ಸಾಧ್ಯ ಎಂದು ತೋರಿಸುವ ಪುಸ್ತಕ ಇದು. ಆದರೆ ಇದಕ್ಕೂ ಅಶ್ವಘೋಷನ ಮರುಳು ತುಸು ತಾಗಿದೆ.

ನನ್ನೊಳಗೆ ಇದೊಂದು ಕುತೂಹಲ ಉರಿಯುತ್ತಿದೆ ವಿ ವಿ ಗಳಲ್ಲಿರುವವರು ಯಾರಾದರೂ ಇದರ ಬೆನ್ನುಹತ್ತಿ ನೋಡಬಹುದು. ಬುದ್ಧ ಭಾಷೆ ಪಾಳಿ. ಶಂಬಾ ಜೋಷಿಯವರು ಪಶುಪಾಲಕರ ಭಾಷೆ ಪಾಳಿಯಾಗಿತ್ತು,ಅದು ಯಮುನೆಯಿಂದ ಚಿತ್ರದುರ್ಗದವರೆಗೆ ಹಬ್ಬಿಕೊಂಡಿತ್ತು ಎನ್ನುತ್ತಾರೆ. ಅಶೋಕ ಸಾಂಚಿಯಿಂದ ಪೂರ್ವಭಾರತದ ಮೂಲಕ ರಾಯಚೂರು,ಕೊಪ್ಪಣ,ಚಿತ್ರದುರ್ಗದವರೆಗ ' ಶಾಸನಗಳನ್ನು ಪಾಳಿ-ಪ್ರಾಕೃತಗಳಲ್ಲಿ ಕೆತ್ತಿಸಿದ್ದನ್ನು ಷ. ಶೆಟ್ಟರ್ ವಿಶೇಷವಾಗಿ ವಿವರಿಸುತ್ತಾರೆ. ಅಂದರೆ ಭಾಷೆ ಗೊತ್ತಿದ್ದ ಪ್ರದೇಶಗಳ ಜನರ ಮಧ್ಯೆ ಅಶೋಕ ತನ್ನ ಗುರುತನ್ನು ಹೇಳಿಕೊಂಡನೆ? ಸಂವಹನ ಸಾಧ್ಯವಿದ್ದ ಕಡೆ ಸಂವಹನ ಮಾಡಿದನೆ?

ಹುಣ್ಣಿಮೆ ಮೋಹಕ. ಚಾಂದ್ರಮಾನ ಪ್ರತಿಭೆಯವರಿಗೆ ಸೋಲು ಖಚಿತ ಎನ್ನುತ್ತಾರೆ ಶಂಬಾ. ಆದರೆ ಹಗಲು ದಮನಿಸಿದ ಆಚರಣೆಗಳು ಬೆಳದಿಂಗಳಲ್ಲಿ ಜೀವತಳೆಯುತ್ತವೆ. ಬೌದ್ಧವೂ ಹೀಗೆ ತಾಂತ್ರಿಕವಾಗಿದೆ. ರಾತ್ರಿಗಳು ಮನುಷ್ಯರನ್ನು ಎಲ್ಲ ಕಡೆ ತಾರತಮ್ಯರಹಿತರನ್ನಾಗಿಸುತ್ತದೆ. ಪ್ರತಿಮಾತ್ಮಕರನ್ನಾಗಿಸುತ್ತದೆ. ಸಂಕೇತಗಳು ಯಾರಿಗೆ ಯಾವಾಗ ಮುಟ್ಟಿಸಬೇಕೊ ಆಗ ಮುಟ್ಟುತ್ತದೆ. ಅರ್ಥವಾಗಬೇಕಾದಾಗ ಅರ್ಥವಾಗುತ್ತದೆ. ಆದರೆ ಆಚರಣೆ ಆರಾಧನೆಯಾಗುತ್ತದೆ.ಆರಾಧನೆ ತರ್ಕ ರಹಿತವಾಗುತ್ತದೆ.ಆರೂಢರಲ್ಲಿ ಇದು ಇನ್ನೂ ಹೆಚ್ಚು. ಆದರೂ ಬಂಡೆ ಸಿಡಿಸಿಯೇ ಚಿನ್ನ ಹೆಕ್ಕಿಕೊಳ್ಳಬೇಕಲ್ಲವೆ?

ಅಂದ ಹಾಗೆ ಸ್ತ್ರೀಯನ್ನು ಬ್ರಹ್ಮಚರ್ಯದ ಪಾತಾಳ ಎನ್ನುತ್ತದೆ ಸುತ್ತ ಪಿಟಕ. ಇಂಥ ಹಲವು ಕಂದಕಗಳಿವೆ ಅದರಲ್ಲಿ. ಚಂದ್ರನ ಮೇಲಿನ ಕಂದಕಗಳು ಹುಣ್ಣಿಮೆಯಲ್ಲಿ ಇನ್ನೂ ಸ್ಪಷ್ಟ ಮತ್ತು ಮೋಹಕ. ಮಕ್ಕಳಲ್ಲಿ ಮೋಡಿ ಮಾಡುತ್ತವೆ. ಆದರೆ ವಾಸ್ತವ ಇಷ್ಟೊಂದು ಮೋಹಕವಾಗಿರಲು ಸಾಧ್ಯವೆ?

■ **ಡಾ.ವೆಂಕಟೇಶಯ್ಯ ನೆಲ್ಲಿಕುಂಟೆ**

## ಸೆ.27ರಿಂದ ಐದು ದಿನಗಳ ಕಾಲ ಚಳ್ಳಕೆರೆ ಪ್ರೀಮಿಯರ್ ಲೀಗ್



» **ಚಳ್ಳಕೆರೆ**

ನಗರದ ಕ್ರಿಕೆಟ್ ಆಟಗಾರರಿಗೆ ಸ್ಪೂರ್ತಿಯಾಗಿರುವ ಚಳ್ಳಕೆರೆ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯವನ್ನು ಸೆ.27ರಿಂದ ಐದು ದಿನಗಳ ಕಾಲ ಡಿ.ಸುಧಾಕರ್ ಕ್ರೀಡಾಂಗಣದಲ್ಲಿ ನಡೆಸಲಾಗುವುದು ಎಂದು ಆಯುಷ್ ಲಯನ್ಸ್ ಪ್ರಾಂಚೈಸಿ ತಂಡದ ನಾಯಕ ಡಾ.ಅನಿಲ್‌ಕುಮಾರ್ ತಿಳಿಸಿದ್ದಾರೆ. ಅವರು, ಈ ಬಗ್ಗೆ ಮಾಹಿತಿ ನೀಡಿ, ನಗರದ ಖಾಸಗಿ ರೆಸ್ಟೋರೇಟ್‌ನಲ್ಲಿ ಸಿಪಿಎಲ್ ಲೀಗ್ ಪಂದ್ಯಗಳ ಬಗ್ಗೆ ಚರ್ಚೆಗಳು ನಡೆದಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಒಟ್ಟು 213 ಆಟಗಾರರಿಂದ ಅರ್ಜಿಗಳು ಬಂದಿದ್ದು, ಅಂತಿಮವಾಗಿ ಸಭೆಯಲ್ಲಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಂಡಗಳಿಗೆ ಮಾತ್ರ ಅವಕಾಶ ನೀಡಲು ನಿರ್ಧರಿಸಲಾಗಿದೆ. ಕಳೆದ ಎರಡುಬಾರಿ ಉತ್ತಮ ಪಂದ್ಯಗಳನ್ನು ನೀಡಿದ ಹಿನ್ನೆಲೆಯಲ್ಲಿ ಮೂರನೇ ಬಾರಿಗೂ ಆಯೋಜಿಸಿರುವ ಸಿಪಿಎಲ್ ಲೀಗ್ ಪಂದ್ಯಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಿಗಲಿದೆ ಎಂದರು. ಕಾರ್ಯಕ್ರಮ ಸಂಪೂರ್ಣ ಮಾಹಿತಿಯನ್ನು ಇನ್ನೂ ಕೆಲವೇ ದಿನಗಳಲ್ಲಿ ನೀಡಲಾಗುವುದು. ಈಗಾಗಲೇ ಪಂದ್ಯಗಳಿಗೆ ಆಯ್ಕೆ ಪ್ರಕ್ರಿಯೆ ಮುಂದುವರೆದಿದೆ ಎಂದರು. ಪಿ.ತಿಪ್ಪೇಸ್ವಾಮಿ, ವಿ.ವೈ.ಪ್ರಮೋದ್, ಅಪ್ಪುವೀರೇಶ್, ಭಗತ್ ಕ್ರಿಕೆಟ್ ಕ್ಲಬ್‌ನ ಪ್ರವೀಣ್, ಶ್ರೀಕಂಠ, ರವಿನಾಯಕ ಮುಂತಾದವರು ಭಾಗವಹಿಸಿದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T